**14.08.2024ರಂದು ಜರುಗಿದ 166ನೇ ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ ಸಭೆ(ಎಸ್‌ಎಲ್‌ಬಿಸಿ)ಯ ನಡಾವಳಿಗಳು**

**ರಾಜ್ಯ ಮಟ್ಟದ ಬ್ಯಾಂಕರ್ಸ್ ಸಮಿತಿ: ಕರ್ನಾಟಕ ಕೂಟ: ಕೆನರಾ ಬ್ಯಾಂಕ್**

**14.08 2024ರದಂ ಜರುಗಿದ 166ನೇ ಎಸ್‌ಎಲ್‌ಬಿಸಿ ಸಭೆಯ ನಡಾವಳಿಗಳು ಮತ್ತು 2024 ಜೂನ್ 30ರ ವರೆಗೆ ಅನ್ವಯವಾಗುವ ಬ್ಯಾಂಕಿಂಗ್ ಅಂಕಿಅಂಶಗಳು**

ಕರ್ನಾಟಕ ರಾಜ್ಯದ 166ನೇ ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ(ಎಸ್‌ಎಲ್‌ಬಿಸಿ)ಯ ತ್ರೈಮಾಸಿಕ ಸಭೆಯನ್ನು 14.08.2024ರಂದು ಬೆಂಗಳೂರಿನ ಶಾಂತಲಾ ನಗರ, ಅಶೋಕ್ ನಗರದ ರೆಸಿಡೆನ್ಸಿ ರಸ್ತೆಯಲ್ಲಿರುವ ನಂ.135 ಹೋಟೆಲ್ ಚಾನ್ಸೆರಿ ಪೆವಿಲಿಯನ್‌ನಲ್ಲಿ ಮಧ್ಯಾಹ್ನ 12.30ಕ್ಕೆ ಆಯೋಜಿಸಲಾಗಿತ್ತು. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಭಾರತೀಯ ರಿಸರ್ವ್ ಬ್ಯಾಂಕ್‌ನ ಪ್ರಾದೇಶಿಕ ನಿರ್ದೇಶಕಿ ಸೋನಾಲಿ ಸೇನ್ ಗುಪ್ತಾ, ಕೆನರಾ ಬ್ಯಾಂಕ್‌ನ ಕಾರ್ಯ ನಿರ್ವಾಹಕ ನಿರ್ದೇಶಕ ಶ್ರೀ ಭವೇಂದ್ರ ಕುಮಾರ್, ರಾಜ್ಯ ಸರ್ಕಾರದ ಹಣಕಾಸು ಇಲಾಖೆ(ಹಣಕಾಸು ಸುಧಾರಣೆಗಳು)ಯ ಕಾರ್ಯದರ್ಶಿ ಡಾ. ವಿಶಾಲ್ ಆರ್, ರಾಜ್ಯ ಸರ್ಕಾರದ ಎನ್‌ಆರ್‌ಎಲ್‌ಎಂ ಪಿಐ ಮಿಷನ್ ನಿರ್ದೇಶಕಿ ಶ್ರೀವಿದ್ಯಾ, ನಬಾರ್ಡ್ ಜನರಲ್ ಮ್ಯಾನೇಜರ್ ಶ್ರೀ. ಪಿ ಸಿ ದಾಶ್, ಭಾರತೀಯ ರಿಸರ್ವ್ ಬ್ಯಾಂಕ್ ಉಪ ಪ್ರಧಾನ ವ್ಯವಸ್ಥಾಪಕ ಶ್ರೀ ವಿ ಹರಿಪ್ರಸಾದ್, ಎಸ್‌ಎಲ್‌ಬಿಸಿ ಕರ್ನಾಟಕದ ಸಂಚಾಲಕ ಮತ್ತು ಕೆನರಾ ಬ್ಯಾಂಕ್ ಮುಖ್ಯ ಜನರಲ್ ಮ್ಯಾನೇಜರ್. ಶ್ರೀ ಕೆ ಜೆ ಶ್ರೀಕಾಂತ್, ಸರ್ಕಾರಿ ಇಲಾಖೆಗಳು, ಕಾರ್ಪೊರೇಷನ್‌ಗಳ ಇತರೆ ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು, ಆಯುಕ್ತರು ಮತ್ತು ನಿರ್ದೇಶಕರು, ಆರ್‌ಬಿಐ,

ನಬಾರ್ಡ್ ಮತ್ತು ವಿವಿಧ ಬ್ಯಾಂಕ್‌ಗಳ ಹಿರಿಯ ಅಧಿಕಾರಿಗಳು ವೀಡಿಯೊ ಕಾನ್ಫರೆನ್ಸ್ ಮೂಲಕ ಸಭೆಯಲ್ಲಿ ಹಾಜರಿದ್ದರು.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಭಾರತೀಯ ರಿಸರ್ವ್ ಬ್ಯಾಂಕ್‌ನ ಪ್ರಾದೇಶಿಕ ನಿರ್ದೇಶಕಿ ಸೋನಾಲಿ ಸೇನ್ ಗುಪ್ತಾ, ಕೆನರಾ ಬ್ಯಾಂಕ್‌ನ ಕಾರ್ಯ ನಿರ್ವಾಹಕ ನಿರ್ದೇಶಕ ಶ್ರೀ ಭವೇಂದ್ರ ಕುಮಾರ್, ರಾಜ್ಯ ಸರ್ಕಾರದ ಹಣಕಾಸು ಇಲಾಖೆ(ಹಣಕಾಸು ಸುಧಾರಣೆಗಳು)ಯ ಕಾರ್ಯದರ್ಶಿ ಡಾ. ವಿಶಾಲ್ ಆರ್, ರಾಜ್ಯ ಸರ್ಕಾರದ ಎನ್‌ಆರ್‌ಎಲ್‌ಎಂ ಪಿಐ ಮಿಷನ್ ನಿರ್ದೇಶಕಿ ಶ್ರೀವಿದ್ಯಾ, ನಬಾರ್ಡ್ ಜನರಲ್ ಮ್ಯಾನೇಜರ್ ಶ್ರೀ. ಪಿ ಸಿ ದಾಶ್, ಭಾರತೀಯ ರಿಸರ್ವ್ ಬ್ಯಾಂಕ್ ಉಪಪ್ರಧಾನ ವ್ಯವಸ್ಥಾಪಕ ಶ್ರೀ ವಿ ಹರಿಪ್ರಸಾದ್ ಅವರನ್ನು ಎಸ್‌ಎಲ್‌ಬಿಸಿ ಕರ್ನಾಟಕದ ಸಂಚಾಲಕ ಶ್ರೀ. ಕೆ ಜೆ ಶ್ರೀಕಾಂತ್ ಸ್ವಾಗತಿಸಿದರು.

**ಕಾರ್ಯಸೂಚಿ ವಿಷಯಗಳ ಚರ್ಚೆ**

ಎಸ್‌ಎಲ್‌ಬಿಸಿ ಕರ್ನಾಟಕದ ಉಪಸಂಚಾಲಕ ಶ್ರೀ. ಬಿ ಪಾರ್ಶ್ವನಾಥ್ ಅವರು ಕಾರ್ಯಸೂಚಿ ಪತ್ರಗಳನ್ನು ಸಭೆಯ ಪ್ರತಿನಿಧಿಗಳ ಮುಂದೆ ಇಡಲಾಗಿದೆ. ವಿಷಯವಾರು ಕಾರ್ಯಸೂಚಿಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಗುತ್ತಿದೆ ಎಂದು ತಿಳಿಸಿದರು. ಸಭೆಯ ನಡಾವಳಿಗಳನ್ನು ದಾಖಲೆಗಾಗಿ ಮತ್ತು ಪಾಲುದಾರರ ಮುಂದಿನ ಅಗತ್ಯ ಕ್ರಮಗಳಿಗಾಗಿ ಇಲ್ಲಿ ಇರಿಸಲಾಗಿದೆ ಎಂದರು.

**ಕಾರ್ಯಸೂಚಿ ವಿಷಯ ಸಂಖ್ಯೆ – 1**

1.1. **15.05.2024 ರಂದು ನಡೆದ** 165**ನೇ ಎಸ್‌ಎಲ್‌ಬಿಸಿ ಸಭೆಯ ನಡಾವಳಿಗಳ ದೃಢೀಕರಣ**

**15.05.2024**ರಂದು ನಡೆದ **165**ನೇ ಎಸ್ಎಲ್‌ಬಿಸಿ ಸಭೆಯ ನಡಾವಳಿಗಳನ್ನು ಎಲ್ಲಾ ಸದಸ್ಯ ಬ್ಯಾಂಕ್‌ಗಳು ಮತ್ತು ಸರ್ಕಾರಿ ಇಲಾಖೆಗಳಿಗೆ ವಿತರಿಸಲಾಗಿದೆ. ಯಾವುದೇ ಸಲಹೆ ಸೂಚನೆಗಳನ್ನು ಸ್ವೀಕರಿಸದ ಕಾರಣ, ಈ ಸಭೆಯು ದಯೆಯಿಂದ ನಡಾವಳಿಗಳನ್ನು ದೃಢೀಕರಿಸಬಹುದು.

1.2 **ಹಿಂದಿನ ಎಸ್‌ಎಲ್‌ಬಿಸಿ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರಗಳ ಅನುಸರಣಾ ಕ್ರಮಗಳು:**

ಬಂಧನ್ ಬ್ಯಾಂಕ್, ಕೋಟಕ್ ಮಹೀಂದ್ರಾ ಬ್ಯಾಂಕ್, ಇಂಡಸ್‌ಇಂಡ್ ಬ್ಯಾಂಕ್, ಎಯು ಸ್ಮಾಲ್ ಫೈನಾನ್ಸ್ ಬ್ಯಾಂಕ್, ಇಎಸ್‌ಎಎಫ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಮತ್ತು ಅಪೆಕ್ಸ್ ಬ್ಯಾಂಕ್|ಗಳು ಎಸ್‌ಎಲ್‌ಬಿಸಿಯ ನವೀಕೃತ ಪೋರ್ಟಲ್‌ನಲ್ಲಿ ದತ್ತಾಂಶ ಅಪ್‌ಲೋಡ್ ಮಾಡಲು ವಿಳಂಬ ಮಾಡಿವೆ ಎಂದು ಸಂಚಾಲಕರು ಸಭೆಯ ಗಮನಕ್ಕೆ ತಂದರು. ಆಗ ಅಧ್ಯಕ್ಷರು, ಎಲ್ಲಾ ಸದಸ್ಯ ಬ್ಯಾಂಕ್‌ಗಳು ನಿಗದಿತ ಸಮಯದೊಳಗೆ ದತ್ತಾಂಶ ಅಪ್‌ಲೋಡ್ ಮಾಡುವಂತೆ ಸಲಹೆ ನೀಡಿದರು.

1.3 **ನಿಯಂತ್ರಕ ಅಥವಾ ನಿಯಂತ್ರಣ ಸಂಸ್ಥೆ(ರೆಗ್ಯುಲೇಟರ್ಸ್)ಗಳಿಗೆ ಸದಸ್ಯ ಬ್ಯಾಂಕ್‌ಗಳಿಂದ ದತ್ತಾಂಶಗಳ ವಿಳಂಬ ಸಲ್ಲಿಕೆ ಅಥವಾ ಸಲ್ಲಿಕೆ ಆಗದಿರುವುದು:**

ಇದಲ್ಲದೆ ಬ್ಯಾಂಕ್ ಆಫ್ ಬರೋಡಾ, ಎಕ್ಸಿಸ್ ಬ್ಯಾಂಕ್, ಡಿಬಿಎಸ್ ಬ್ಯಾಂಕ್, ಸಿಎಸ್‌ಬಿ ಮತ್ತು ಡಿಸಿಬಿ ಬ್ಯಾಂಕ್‌ಗಳು ವಿವಿಧ ದತ್ತಾಂಶ ಸಲ್ಲಿಸಲು ಸತತವಾಗಿ ವಿಳಂಬ ಮಾಡುತ್ತಿವೆ ಎಂದು ಅವರು ಮಾಹಿತಿ ನೀಡಿದರು. ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರು ಬ್ಯಾಂಕ್ ಆಫ್ ಬರೋಡಾ ಮತ್ತು ಎಕ್ಸಿಸ್ ಬ್ಯಾಂಕ್|ಗೆ ನಿಗದಿತ ಕಾಲಮಿತಿಯೊಳಗೆ ದತ್ತಾಂಶ ಒದಗಿಸಲು ಸಲಹೆ ನೀಡಿದರು.

ಕಳೆದ **3** ತ್ರೈಮಾಸಿಕಗಳಲ್ಲಿ ದತ್ತಾಂಶ ಸಲ್ಲಿಕೆಗೆ ಸದಾ ವಿಳಂಬ ಮಾಡಿರುವ ಬ್ಯಾಂಕ್‌ಗಳ ಹೆಸರು ನೀಡುವಂತೆ ಮುಖ್ಯ ಕಾರ್ಯದರ್ಶಿ ಅವರು ಎಸ್‌ಎಲ್‌ಬಿಸಿಗೆ ಸೂಚಿಸಿದರು.

**ಕೈಗೊಂಡ ಕ್ರಮದ ವರದಿ(ಎಟಿಆರ್)**: ಬ್ಯಾಂಕ್ ಆಫ್ ಬರೋಡಾ, ಡಿಬಿಎಸ್ ಬ್ಯಾಂಕ್, ಡಿಸಿಬಿ ಬ್ಯಾಂಕ್ ಮತ್ತು ಬಂಧನ್ ಬ್ಯಾಂಕ್‌ಗಳು ವಿವಿಧ ದತ್ತಾಂಶ ಸಲ್ಲಿಸುವಲ್ಲಿ ಸದಾ ವಿಳಂಬ ಮಾಡುತ್ತಿವೆ.)

**ಕಾರ್ಯಸೂಚಿ ವಿಷಯ ಸಂಖ್ಯೆ – 2**

**2.1 2024 ಜೂನ್ 30ಕ್ಕೆ ಅನ್ವಯವಾಗುವಂತೆ ಬ್ಯಾಂಕಿಂಗ್ ಅಂಕಿಅಂಶಗಳು:**

2024 ಜೂನ್‌ವರೆಗೆ ಅನ್ವಯವಾಗುವಂತೆ, ಕರ್ನಾಟಕ ರಾಜ್ಯದಲ್ಲಿ ಠೇವಣಿ, ಸಾಲಗಳು(ಮುಂಗಡಗಳು), ಸಾಲ-ಠೇವಣಿ(ಸಿಡಿ) ಅನುಪಾತ, ಆದ್ಯತಾ ವಲಯಕ್ಕೆ ನೀಡಿರುವ ಒಟ್ಟು ಸಾಲಗಳು(ಪಿಎಸ್‌ಎ), ಸಣ್ಣ, ಅತಿಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳ(ಎಂಎಸ್‌ಎಂಇ) ವಲಯಕ್ಕೆ ನೀಡಿರುವ ಸಾಲಗಳು ಮತ್ತು ಕೃಷಿ ರಂಗಕ್ಕೆ ನೀಡಿರುವ ಸಾಲಗಳ ಬ್ಯಾಂಕಿಂಗ್ ಅಂಕಿಅಂಶಗಳನ್ನು ಉಪಸಂಚಾಲಕರು ಸಭೆಯಲ್ಲಿ ಪ್ರಸ್ತುತಪಡಿಸಿದರು.

ವರ್ಷದಿಂದ ವರ್ಷಕ್ಕೆ(ವೈ-ಒ-ವೈ) ಠೇವಣಿ ಸಂಗ್ರಹದಲ್ಲಿ 11% ಮತ್ತು ಸಾಲ ನೀಡಿಕೆಯಲ್ಲಿ 20% ಬೆಳವಣಿಗೆ ಕಂಡುಬಂದಿದೆ. 2024 ಜೂನ್ 30ಕ್ಕೆ ಅನ್ವಯವಾಗುವಂತೆ, ರಾಜ್ಯದ ಸಾಲ-ಠೇವಣಿ(ಸಿಡಿ) ಅನುಪಾತ 79% ಮಟ್ಟದಲ್ಲಿದೆ.

2023 ಜೂನ್‌ನಲ್ಲಿ ಆದ್ಯತಾ ವಲಯದ ಸಾಲ(ಪಿಎಸ್‌ಎ) 57,734 ರೂ.ಗೆ ಉತ್ಕೃಷ್ಟ ಬೆಳವಣಿಗೆ ಕಂಡುಬಂದಿದೆ. ವರ್ಷದಿಂದ ವರ್ಷಕ್ಕೆ ಆಧಾರದ ಮೇಲೆ ಶೇಕಡಾವಾರು 15% ಬೆಳವಣಿಗೆ ತೋರಿಸಿದೆ.

2023 ಜೂನ್‌ವರೆಗೆ ಕೃಷಿ ವಲಯಕ್ಕೆ 1,95,180 ಕೋಟಿ ರೂ. ಸಾಲ ಒದಗಿಸಲಾಗಿತ್ತು. ಅದೇ 2024 ಜೂನ್ ಹೊತ್ತಿಗೆ ಕೃಷಿ ಸಾಲ ಪ್ರಮಾಣ 2,25,881 ಕೋಟಿ ರೂ.ಗೆ ಏರಿಕೆ ಕಂಡಿದೆ. ವರ್ಷದಿಂದ ವರ್ಷಕ್ಕೆ ಆಧಾರದಲ್ಲಿ ಕೃಷಿ ಸಾಲ ಪ್ರಮಾಣ 30,701 ಕೋಟಿ ರೂ.(16%)ಗೆ ಹೆಚ್ಚಳವಾಗಿದೆ.

ಎಂಎಸ್‌ಎಂಇ ವಲಯಕ್ಕೆ 2023 ಜೂನ್‌ಗೆ ಅಥವಾ ವರೆಗೆ ಸಾಲ ನೀಡಿಕೆ ಪ್ರಮಾಣ 1,46,636 ಕೋಟಿ ರೂ. ಇತ್ತು. ಅದೇ 2024 ಜೂನ್ ಹೊತ್ತಿಗೆ 1,71,887 ಕೋಟಿ ರೂ. ಸಾಲ ನೀಡಲಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ 25,250 ಕೋಟಿ ರೂ. ಹೆಚ್ಚಿನ ಸಾಲ ನೀಡಲಾಗಿದೆ. ಅಂದರೆ, ವರ್ಷದಿಂದ ವರ್ಷಕ್ಕೆ ಆಧಾರದಲ್ಲಿ 17% ಬೆಳವಣಿಗೆ ಕಂಡಿದೆ.

ಎಲ್ಲಾ ಸದಸ್ಯ ಬ್ಯಾಂಕ್‌ಗಳು ಮತ್ತು ಲೀಡ್ ಜಿಲ್ಲಾ ಮ್ಯಾನೇಜರ್(ಬ್ಯಾಂಕ್‌ಗಳು)-ಎಲ್‌ಡಿಎಂಗಳು ವಿಶೇಷವಾಗಿ ಶಿಕ್ಷಣ, ವಸತಿ ಮತ್ತು ರಫ್ತು ಸಾಲ ಯೋಜನೆಗಳಡಿ, ಆದ್ಯತೆಯ ವಲಯಗಳಿಗೆ ಹೆಚ್ಚಿನ ಸಾಲ ಸೌಲಭ್ಯ ಒದಗಿಸಲು ಮತ್ತು ಆದ್ಯತಾ ವಲಯದ ಸಾಲ(ಪಿಎಸ್‌ಎ)ದ ಅಡಿ, ಸಾಲ ವಿತರಣೆ ಸುಧಾರಿಸಲು ಹೆಚ್ಚಿನ ಗಮನ ಹರಿಸುವಂತೆ ಸಂಚಾಲಕರು ಸಭೆಗೆ ಮನವಿ ಮಾಡಿದರು.

**ಕಾರ್ಯಸೂಚಿ ವಿಷಯ ಸಂಖ್ಯೆ – 3**

**3.1. ವಾರ್ಷಿಕ ಸಾಲ ಯೋಜನೆ(ಎಸಿಪಿ) ಮತ್ತು ಆದ್ಯತಾ ವಲಯಕ್ಕೆ ಸಾಲ ನೀಡಿಕೆಯಲ್ಲಿ ಆಗಿರುವ ಸಾಧನೆ:**

ಉಪಸಂಚಾಲಕರು 2024-25ರ ಸಾಲಿನ ಜೂನ್ ತ್ರೈಮಾಸಿಕದಲ್ಲಿ ಆಗಿರುವ ಸಾಲಗಳ ವಿತರಣೆಯ ತುಲನಾತ್ಮಕ ವಿಶ್ಲೇಷಣೆ ಪ್ರಸ್ತುತಪಡಿಸಿದರು.

- ಬ್ಯಾಂಕ್‌ಗಳು ಅಲ್ಪಾವಧಿಯ ಕೃಷಿ ಸಾಲಗಳ ಅಡಿ, 30,588 ಕೋಟಿ ರೂ. ವಿತರಿಸಿದ್ದು, 30.06.2024ಕ್ಕೆ ಅನ್ವಯವಾಗುವಂತೆ, ವಾರ್ಷಿಕ ಗುರಿಯ 27% ಸಾಧನೆ ದಾಖಲಿಸಿವೆ.

- ಬ್ಯಾಂಕ್‌ಗಳು ಕೃಷಿ ಅವಧಿ ಸಾಲಗಳ ಅಡಿ, 2024 ಜೂನ್ ವರೆಗೆ 24,468 ಕೋಟಿ ರೂ. ವಿತರಿಸಿದ್ದು, ವಾರ್ಷಿಕ ಗುರಿಯ 32% ಸಾಧನೆ ದಾಖಲಿಸಿದೆ.
- 30.06.2024ಕ್ಕೆ ಅನ್ವಯವಾಗುವಂತೆ, ಕೃಷಿ ಸಾಲದ ವಾರ್ಷಿಕ ಗುರಿಯಲ್ಲಿ 29% ಸಾಧನೆ ದಾಖಲಿಸಿದೆ.
- 30.06.2024ಕ್ಕೆ ಅನ್ವಯವಾಗುವಂತೆ, ಬ್ಯಾಂಕ್‌ಗಳು ಎಂಎಸ್‌ಎಂಇ ವಲಯಕ್ಕೆ 72,985 ಕೋಟಿ ರೂ. ಸಾಲ ವಿತರಿಸಿದ್ದು, ವಾರ್ಷಿಕ ಗುರಿಯ 42% ಸಾಧನೆ ದಾಖಲಿಸಿವೆ.
- 30.06.2024ಕ್ಕೆ ಅನ್ವಯವಾಗುವಂತೆ, ಬ್ಯಾಂಕ್‌ಗಳು ಒಟ್ಟು ವೈಯಕ್ತಿಕ ಉಳಿತಾಯ ಅನುಪಾತ(ಪಿಎಸ್‌ಎ) ಅಡಿ, 1,32,866 ಕೋಟಿ ರೂ. ಸಾಲ ವಿತರಿಸಿ, ವಾರ್ಷಿಕ ಗುರಿಯ 34% ಸಾಧನೆ ದಾಖಲಿಸಿವೆ.

ಎಲ್ಲ ಸದಸ್ಯ ಬ್ಯಾಂಕ್‌ಗಳು ಶಿಕ್ಷಣ ಮತ್ತು ರಫ್ತು ಕ್ಷೇತ್ರಗಳತ್ತ ಹೆಚ್ಚು ಗಮನ ಹರಿಸಬೇಕು ಎಂದು ಅಧ್ಯಕ್ಷರು ಸಲಹೆ ನೀಡಿದರು. ಆದ್ಯತೆಯ ಶಿಕ್ಷಣ ಕ್ಷೇತ್ರದ ಅಡಿ, ಸಾಲ ವಿತರಣೆ ಸುಧಾರಿಸಲು ಎಲ್ಲಾ ಶೈಕ್ಷಣಿಕ ಯೋಜನೆಗಳನ್ನು ಜನಪ್ರಿಯಗೊಳಿಸಲು ಮತ್ತು ಪ್ರಚಾರ ಮಾಡಲು ವಿಶೇಷ ಅಭಿಯಾನ ಆಯೋಜಿಸುವಂತೆ ಅಧ್ಯಕ್ಷರು ಬ್ಯಾಂಕರ್‌ಗಳಿಗೆ ಮನವಿ ಮಾಡಿದರು.
ಇದಲ್ಲದೆ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ನಿಗದಿಪಡಿಸಲಾದ ಗುರಿಗಳನ್ನು ಪರಿಶೀಲಿಸುವಂತೆ ಅಧ್ಯಕ್ಷರು ಎಸ್‌ಎಲ್‌ಬಿಸಿಗೆ ನಿರ್ದೇಶನ ನೀಡಿದರು. ಹೆಚ್ಚುವರಿಯಾಗಿ, ಬೆಂಗಳೂರು ಇಂಟರ್‌ನ್ಯಾಶನಲ್ ಏರ್‌ಪೋರ್ಟ್ ಲಿಮಿಟೆಡ್‌ನಲ್ಲಿ ರಫ್ತು ಕೇಂದ್ರ ರಚಿಸಲಾಗುತ್ತಿದೆ. ರಾಜ್ಯ ಸರಕಾರವು ರಾಜ್ಯದಲ್ಲಿ ರಫ್ತಿಗೆ ಆದ್ಯತೆ ನೀಡುತ್ತಿದ್ದು, ಎಲ್ಲ ಬ್ಯಾಂಕ್ ಗಳು ರಫ್ತು ವಲಯದಡಿ ಸಾಲ ನೀಡಲು ಹೆಚ್ಚಿನ ಆದ್ಯತೆ ನೀಡಬೇಕಿದೆ.

ವಿಶೇಷವಾಗಿ ಸಾಮಾಜಿಕ ಮೂಲಸೌಕರ್ಯ, ರಫ್ತು ಮತ್ತು ನವೀಕರಿಸಬಹುದಾದ ಇಂಧನ ವಲಯಕ್ಕೆ ನೀಡುತ್ತಿರುವ ಸಾಲ ಯೋಜನೆ ಕಡಿಮೆ ಇರುವುದರಿಂದ, 2024-

2025ಕ್ಕೆ ವಾರ್ಷಿಕ ಸಾಲ ಯೋಜನೆ(ಎಸಿಪಿ)ಯ ನಿಗದಿ(ನೆಲೆಗೊಳಿಸುವಿಕೆ)ಯನ್ನು ಪರಿಶೀಲಿಸಬೇಕು ಎಂದು ಸೂಚಿಸಿದರು.

**ಕೈಗೊಂಡ ಕ್ರಮದ ವರದಿ(ಎಟಿಆರ್)**

**ಆರ್ಥಿಕ ವರ್ಷ 2024-25ಕ್ಕೆ ವಾರ್ಷಿಕ ಸಾಲ ಯೋಜನೆ(ಎಸಿಪಿ) ಗುರಿ ನಿಗದಿ:** ಇದಕ್ಕೂ ಮುನ್ನ, ಜಿಲ್ಲೆಗಳಿಗೆ 'ವಾರ್ಷಿಕ ಸಾಲ ಯೋಜನೆ'ಯ ಗುರಿ ನಿಗದಿಯು ಹಿಂದಿನ ವರ್ಷದ ಗುರಿ ಮತ್ತು ಜಿಲ್ಲೆಗಳಿಗೆ ಸಿಗುತ್ತಿದ್ದ ಸಾಲ ಲಭ್ಯತೆಯನ್ನು ಆಧರಿಸಿತ್ತು. ಆದರೆ ವಾಸ್ತವಿಕ ಗುರಿ ಹೊಂದಲು, ಪ್ರಸಕ್ತ ವರ್ಷ 2024-25ಕ್ಕೆ 'ವಾರ್ಷಿಕ ಸಾಲ ಯೋಜನೆ'ಯ ನಿಗದಿಯನ್ನು 2023ರ ಡಿಸೆಂಬರ್ ಸಾಧನೆ ಮತ್ತು ಅಭಿವೃದ್ಧಿ ಇಲಾಖೆ(ಎಫ್ಐಡಿಡಿ), ಆರ್‌ಬಿಐ ಮತ್ತು ನಬಾರ್ಡ್ ಮಾರ್ಗದರ್ಶನದಂತೆ ಜಿಲ್ಲೆಗಳಿಗೆ ಲಭ್ಯವಿರುವ ಸಂಭಾವ್ಯ ಸಾಲ ಆಧರಿಸಿ ಮಾಡಲಾಗಿದೆ.

**ತ್ರೈಮಾಸಿಕ ಆಧಾರದಲ್ಲಿ ಶೈಕ್ಷಣಿಕ ಸಾಲ ಪರಾಮರ್ಶೆ:** ತ್ರೈಮಾಸಿಕ ಆಧಾರದಲ್ಲಿ ಶೈಕ್ಷಣಿಕ ಸಾಲ ಯೋಜನೆಗಳ ಪರಾಮರ್ಶೆ ನಡೆಸಿ, ವಿವರವಾದ ವರದಿ ಸಲ್ಲಿಸುವಂತೆ ಅಧ್ಯಕ್ಷರು ಸಭೆಯಲ್ಲಿ ಬ್ಯಾಂಕ್‌ಗಳಿಗೆ ಸೂಚನೆ ನೀಡಿದರು. ತ್ರೈಮಾಸಿಕ ಆಧಾರದಲ್ಲಿ ಸದಸ್ಯ ಬ್ಯಾಂಕ್‌ಗಳ ಶೈಕ್ಷಣಿಕ ಸಾಲದ ಕಾರ್ಯಕ್ಷಮತೆ ಪರಿಶೀಲಿಸುವಂತೆ ಬ್ಯಾಂಕ್ ಆಫ್ ಬರೋಡಾದ 'ರಿಟೇಲ್ ಉಪಸಮಿತಿ'ಯ ಸಂಚಾಲಕರಿಗೆ ಸೂಚನೆ ನೀಡಲಾಗಿದೆ. ಅಲ್ಲದೆ, ರಾಜ್ಯದಲ್ಲಿ ಕಡಿಮೆ ಕಾರ್ಯಕ್ಷಮತೆ ಹೊಂದಿರುವ ಬ್ಯಾಂಕ್‌ಗಳು ಶೈಕ್ಷಣಿಕ ಸಾಲ ವಿತರಣೆಯಲ್ಲಿ ಕಾರ್ಯಕ್ಷಮತೆ ಸುಧಾರಿಸಲು ಸಲಹೆ ನೀಡುವಂತೆಯೂ ಸೂಚನೆ ನೀಡಲಾಗಿದೆ.

**ರಫ್ತು ವಲಯದ ಸಾಲ ವರದಿ:** ಪ್ರಸ್ತುತ ಕೃಷಿ ಮತ್ತು ಎಂಎಸ್ಎಂಇ ವಲಯಗಳಿಗೆ ಅವುಗಳ ಚಟುವಟಿಕೆ ಆಧಾರದ ಮೇಲೆ ರಫ್ತು ಸಾಲಗಳನ್ನು ವಿತರಿಸಲಾಗುತ್ತಿದೆ ಎಂದು ಬಹುತೇಕ ಬ್ಯಾಂಕ್‌ಗಳು ಸಭೆಯ ಗಮನಕ್ಕೆ ತಂದವು. "ರಫ್ತು ಕ್ರೆಡಿಟ್ ಹೆಡ್" ಅಡಿ ಪಡೆದಿರುವ ಸಾಲ ಖಾತೆಗಳ ವರದಿಗಳ ಕಾರ್ಯಸಾಧ್ಯತೆ ಪರಿಶೀಲಿಸುವಂತೆ ಅಧ್ಯಕ್ಷರು ಬ್ಯಾಂಕ್‌ಗಳಿಗೆ ಸೂಚಿಸಿದರು. "ರಫ್ತು ಕ್ರೆಡಿಟ್ ಹೆಡ್" ಅಡಿ ಪ್ರತ್ಯೇಕವಾಗಿ ಈ

ಖಾತೆಗಳನ್ನು ಹೊರತೆಗೆಯುವ ಮತ್ತು ವರದಿಗಳ ಕಾರ್ಯಸಾಧ್ಯತೆಗಳನ್ನು ಪರಿಶೀಲಿಸುವಂತೆಯೂ ಬ್ಯಾಂಕುಗಳಿಗೆ ಸೂಚನೆ ನೀಡಿದರು.

**3.2 2024 ಮಾರ್ಚ್‌ವರೆಗೆ ಅನ್ವಯವಾಗುವಂತೆ, ವಾರ್ಷಿಕ ಸಾಲ ಯೋಜನೆಯ ಬ್ಯಾಂಕ್‌ವಾರು ಕಾರ್ಯಕ್ಷಮತೆ, ಸಾಧನೆ:**

30.06.2024ಕ್ಕೆ ಅನ್ವಯವಾಗುವಂತೆ, ವಾರ್ಷಿಕ ಸಾಲ ಯೋಜನೆ(ಎಸಿಪಿ) ಅಡಿ, ಎಲ್ಲಾ ಬ್ಯಾಂಕ್‌ಗಳ ಕಾರ್ಯಕ್ಷಮತೆಯನ್ನು ಸಭೆ ಗಮನಿಸಿತು. ಕಳಪೆ ಕಾರ್ಯಕ್ಷಮತೆ ತೋರಿರುವ ಬ್ಯಾಂಕ್‌ಗಳು ತ್ರೈಮಾಸಿಕ ಆಧಾರದಲ್ಲಿ ವಾರ್ಷಿಕ ಸಾಲ ಯೋಜನೆ(ಎಸಿಪಿ) ಗುರಿ ಸಾಧಿಸಬೇಕು ಎಂದು ಅಧ್ಯಕ್ಷರು ಸಲಹೆ ನೀಡಿದರು.

ಸಾರ್ವಜನಿಕ ರಂಗದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕ್ ಆಫ್ ಮಹಾರಾಷ್ಟ್ರ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಇಂಡಿಯನ್ ಬ್ಯಾಂಕ್, ಪಂಜಾಬ್ ನ್ಯಾಷನಲ್ ಬ್ಯಾಂಕ್, ಪಂಜಾಬ್ ಮತ್ತು ಸಿಂಧ್ ಬ್ಯಾಂಕ್ ಮತ್ತು ಇತರ ಖಾಸಗಿ ವಲಯದ ಎಚ್‌ಡಿಎಫ್‌ಸಿ, ಎಕ್ಸಿಸ್ ಬ್ಯಾಂಕ್ ಮತ್ತು ಐಸಿಐಸಿಐ ಬ್ಯಾಂಕ್‌ಗಳು ಆದ್ಯತಾ ವಲಯ ಮತ್ತು ಕೃಷಿ ವಲಯದ ಕಡ್ಡಾಯ ಗುರಿ ಕ್ರಮವಾಗಿ 40% ಮತ್ತು 18% ಸಾಧಿಸುವಲ್ಲಿ ಹಿಂದೆಬಿದ್ದಿವೆ ಎಂದು ಉಪಸಂಚಾಲಕರು ಮಾಹಿತಿ ನೀಡಿದರು. ಆಗ ಅಧ್ಯಕ್ಷರು, ವಿಶೇಷವಾಗಿ ಎಸ್‌ಬಿಐ, ಪಿಎನ್‌ಬಿ, ಬಿಒಬಿ, ಎಚ್‌ಡಿಎಫ್‌ಸಿ ಇತ್ಯಾದಿ ಬ್ಯಾಂಕ್‌ಗಳು ಆದ್ಯತಾ ವಲಯ ಮತ್ತು ಕೃಷಿ ವಲಯಕ್ಕೆ ಸಾಲ ನೀಡಲು ಆರ್‌ಬಿಐ ರೂಪಿಸಿರುವ ಕಡ್ಡಾಯ ಗುರಿಗಳನ್ನು ಸಾಧಿಸಲು ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

**(ಕ್ರಮ: ಎಸ್‌ಬಿಐ, ಬಿಒಐ, ಬಿಒಎಂ, ಸೆಂಟ್ರಲ್ ಬ್ಯಾಂಕ್, ಪಿಎಸ್‌ಬಿ, ಯುಸಿಬ ಬ್ಯಾಂಕ್, ಎಚ್‌ಡಿಎಫ್‌ಸಿ, ಎಕ್ಸಿಸ್ ಬ್ಯಾಂಕ್ ಮತ್ತು ಪಿಎನ್‌ಬಿ)**

**ಕಾರ್ಯಸೂಚಿ ವಿಷಯ ಸಂಖ್ಯೆ – 4**

**4. ಜಿಲ್ಲಾವಾರು ವಾರ್ಷಿಕ ಸಾಲ ಯೋಜನೆಯ ಕಾರ್ಯಕ್ಷಮತೆ**

ಆರ್ಥಿಕ ವರ್ಷ 2024-25ರ ಜೂನ್ ತ್ರೈಮಾಸಿಕದಲ್ಲಿ ಉತ್ತರ ಕನ್ನಡ(39%), ಧಾರವಾಡ(38%), ಕೊಡಗು(35%), ಬೆಂಗಳೂರು ಗ್ರಾಮಾಂತರ(35%) ಮತ್ತು ಬೆಂಗಳೂರು ನಗರ(31%) ಈ 5 ಜಿಲ್ಲೆಗಳು ವಾರ್ಷಿಕ ಸಾಲ ಯೋಜನೆ ಅಡಿ ಉನ್ನತ ಸಾಧನೆ ಮಾಡಿವೆ ಎಂದು ಸಂಚಾಲಕರು ಸಭೆಗೆ ತಿಳಿಸಿದರು. ಇನ್ನುಳಿದ ಜಿಲ್ಲೆಗಳು ತ್ರೈಮಾಸಿಕ ಗುರಿಗಳ ಪೈಕಿ ಕನಿಷ್ಠ 25% ಸಾಧನೆ ಮಾಡಿವೆ ಎಂದು ಅವರು ತಿಳಿಸಿದರು.

**(ಕ್ರಮ: ಎಲ್ಲಾ ಲೀಡ್ ಜಿಲ್ಲಾ ಮ್ಯಾನೇಜರ್‌ಗಳು)**

**ಕಾರ್ಯಸೂಚಿ ವಿಷಯ ಸಂಖ್ಯೆ – 5**

**60%ಗಿಂತ ಕಡಿಮೆ ಸಾಲ-ಠೇವಣಿ ಅನುಪಾತ(ಸಿಡಿ) ಹೊಂದಿರುವ ಜಿಲ್ಲೆಗಳು ಮತ್ತು ಜಿಲ್ಲಾ ಸಮಾಲೋಚನಾ ಸಮಿತಿ(ಡಿಸಿಸಿ)ಯ ವಿಶೇಷ ಉಪಸಮಿತಿಗಳ ಕೆಲಸ ಪರಾಮರ್ಶೆ**

30.06.2024ಕ್ಕೆ ಅನ್ವಯವಾಗುವಂತೆ, ರಾಜ್ಯದ ಸಾಲ-ಠೇವಣಿ(ಸಿಡಿ) ಅನುಪಾತ 79.01% ಇದೆ ಎಂದು ಉಪಸಂಚಾಲಕರು ಸಭೆಗೆ ಮಾಹಿತಿ ನೀಡಿದರು.

ಸಿಡಿ ಅನುಪಾತ ಸುಧಾರಿಸಲು ಎರಡು ಜಿಲ್ಲೆಗಳಲ್ಲಿ ಉಪಸಮಿತಿ ರಚನೆಯಾದ ನಂತರ ಸ್ವಲ್ಪ ಸುಧಾರಣೆ ತೋರಿವೆ. ಸಮರ್ಪಕ ಮೂಲಸೌಕರ್ಯ ಒದಗಿಸಿದರೆ ಮತ್ತಷ್ಟು ಸುಧಾರಣೆ ಕಾಣಬಹುದು ಎಂದು ಆ ಎರಡು ಜಿಲ್ಲೆಗಳ ಲೀಡ್ ಜಿಲ್ಲಾ ಮ್ಯಾನೇಜರ್‌ಗಳು ಸೂಚಿಸಿದ್ದಾರೆ ಎಂದು ಉಪಸಂಚಾಲಕರು ಸಭೆಗೆ ತಿಳಿಸಿದರು.

ಸಿಡಿ ಅನುಪಾತ ತಗ್ಗಲು ಕಾರಣವಾದ ಅಂಶಗಳನ್ನು 2 ಜಿಲ್ಲೆಗಳ ಲೀಡ್ ಜಿಲ್ಲಾ ಮ್ಯಾನೇಜರ್‌ಗಳು ಒದಗಿಸಿದ್ದು, ಅವು ಈ ಕೆಳಗಿನಂತಿವೆ:

**1.** ಸಿಆರ್‌ಝಡ್(ಕರಾವಳಿ ನಿಯಂತ್ರಣ ವಲಯ) ನಿರ್ಬಂಧಗಳು ಮತ್ತು ಅರಣ್ಯ ಪ್ರದೇಶದ ನಿರ್ಬಂಧಗಳಿಂದಾಗಿ ಕೈಗಾರಿಕಾ ಚಟುವಟಿಕೆಗಳ ಸೀಮಿತ ವ್ಯಾಪ್ತಿಯು ಜಿಲ್ಲೆಯಲ್ಲಿ ಕೈಗಾರಿಕಾ ಬೆಳವಣಿಗೆಗೆ ಅಡ್ಡಿಯಾಗಿದೆ.

**2.** ಎರಡೂ ಜಿಲ್ಲೆಗಳ ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಸುಮಾರು 40% ಅರಣ್ಯದಿಂದ ಆವೃತವಾಗಿದೆ ಮತ್ತು 15% ಭೂಮಿ ಬಂಜರು ಅಥವಾ ಕೃಷಿಗೆ ಲಭ್ಯವಿಲ್ಲ. ಇದು ಸಿಡಿ ಅನುಪಾತ ತಗ್ಗಲು ಪ್ರಮುಖ ಕಾರಣಗಳಲ್ಲಿ ಒಂದಾಗಿದೆ.

**(ಕ್ರಮ: ಉತ್ತರ ಕನ್ನಡ, ಉಡುಪಿ ಎಲ್‌ಡಿಎಂಗಳು ಮತ್ತು (ಜಿಲ್ಲಾ ಸಮಿತಿಗಳು(ಡಿಸಿಗಳು) ಮತ್ತು ಎಲ್ಲಾ ಸದಸ್ಯ ಬ್ಯಾಂಕ್‌ಗಳು)**

**ಕಾರ್ಯಸೂಚಿ ವಿಷಯ ಸಂಖ್ಯೆ – 6**

**ಸಮಸ್ಯೆಗಳು - ತರಬೇತಿ ವೆಚ್ಚಗಳ ಬಾಕಿ ಉಳಿದಿರುವ ಬಿಪಿಎಲ್ ಕ್ಲೇಮುಗಳ ಮರುಪಾವತಿ:**

ಕರ್ನಾಟಕ ಸರ್ಕಾರದ ಕೌಶಲಾಭಿವೃದ್ಧಿ ಇಲಾಖೆಯು ಬಿಪಿಎಲ್ ಕ್ಲೇಮುಗಳಿಗೆ 23 ಕೋಟಿ ರೂ. ಬಿಡುಗಡೆ ಮಾಡಿರುವುದಕ್ಕೆ ಉಪಸಂಚಾಲಕರು ಕೃತಜ್ಞತೆಗಳನ್ನು ವ್ಯಕ್ತಪಡಿಸಿದ್ದು, ಬಾಕಿ ಉಳಿದಿರುವ 34.19 ಕೋಟಿ ರೂ. ಹಣವನ್ನು ಸಾಧ್ಯವಾದಷ್ಟು ಬೇಗ ಬಿಡುಗಡೆ ಮಾಡುವಂತೆ ಇಲಾಖೆಗೆ ಮನವಿ ಮಾಡಿದರು. ಭಾರತ ಸರ್ಕಾರದಿಂದ ಹಣ ಸ್ವೀಕರಿಸಿದ ಕೂಡಲೇ ಬಿಡುಗಡೆ ಮಾಡುವುದಾಗಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್(ಎನ್‌ಆರ್‌ಎಲ್‌ಎಂ) ಇಲಾಖೆಯ ಮಿಷನ್ ನಿರ್ದೇಶಕರು ಸಭೆಯಲ್ಲಿ ಭರವಸೆ ನೀಡಿದರು.

ಬಿಪಿಎಲ್ ಕ್ಲೇಮು ಬಾಕಿ ಮೊತ್ತವನ್ನು ಕೂಡಲೇ ತೆರವುಗೊಳಿಸುವಂತೆ ಅಧ್ಯಕ್ಷರು ಎನ್‌ಎಲ್‌ಎಂ ಇಲಾಖೆಗೆ ಸೂಚನೆ ನೀಡಿದರು.

**(ಕ್ರಮ: ಕೌಶಲ್ಯಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ)**

**ಕಾರ್ಯಸೂಚಿ ವಿಷಯ ಸಂಖ್ಯೆ – 7**

**ಸಿಬಿಆರ್‌ಎಸ್‌ಇಟಿಐ ಬಳ್ಳಾರಿ – ನಿರ್ದೇಶಕರು, ಸಿಬಿಆರ್‌ಎಸ್‌ಇಟಿಐ, ಬಳ್ಳಾರಿ ಅವರಿಗೆ 1.11 ಎಕರೆ ಭೂಮಿ 33 ವರ್ಷಗಳ ಗುತ್ತಿಗೆ ಆಧಾರದ ಮೇಲೆ ಹಂಚಿಕೆ:**

2022ರ ಏಪ್ರಿಲ್‌ಗೆ ಮೊದಲು ಆರ್‌ಎಸ್‌ಇಟಿಐಗೆ 2 ಭೂಮಿ ಮಂಜೂರು ಮಾಡಲಾಗಿತ್ತು, ಆದರೆ ಎರಡೂ ಜಮೀನುಗಳು ಕಲ್ಬುರ್ಗಿ ಮತ್ತು ಧಾರವಾಡದ ಹೈಕೋರ್ಟ್ ಪೀಠಗಳಲ್ಲಿ ದಾವೆಯಲ್ಲಿವೆ ಎಂದು ಸಂಚಾಲಕರು ಸಭೆಗೆ ತಿಳಿಸಿದರು.

ಈ ಸಮಸ್ಯೆಯನ್ನು ತುರ್ತಾಗಿ ಪರಿಹರಿಸುವಂತೆ ಅಧ್ಯಕ್ಷರು, ಕೌಶಲ್ಯಾಭಿವೃದ್ಧಿ ಇಲಾಖೆಗೆ ಸೂಚಿಸಿದರು.

**(ಕ್ರಮ: ಕೌಶಲ್ಯಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ)**

**ಕಾರ್ಯಸೂಚಿ ವಿಷಯ ಸಂಖ್ಯೆ – 8**

**22.4 ವಿಜಯನಗರ ಜಿಲ್ಲೆಯಲ್ಲಿ ಹೊಸ ಆರ್‌ಎಸ್‌ಇಟಿಐ ಆರಂಭ(ಉದ್ಘಾಟನೆ)**

ಹೊಸ ಆರ್‌ಎಸ್‌ಇಟಿಐ(ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆ) ಕಟ್ಟಡ ನಿರ್ಮಾಣಕ್ಕೆ ಸೂಕ್ತ ನಿವೇಶನ ಮಂಜೂರು ಮಾಡುವಂತೆ ಭಾರತೀಯ ಸ್ಟೇಟ್ ಬ್ಯಾಂಕ್ ದಿನಾಂಕ 19-07-2024ರಂದು ಇ-ಮೇಲ್ ಮೂಲಕ, ಅಲ್ಲದೆ, ದಿನಾಂಕ 01.02.2024 ಮತ್ತು 08.04.2024ರಂದು ಪತ್ರ ಮೂಲಕ ವಿಜಯನಗರ ಜಿಲ್ಲಾಧಿಕಾರಿಗೆ ಮನವಿ ಮಾಡಿತ್ತು. ಅದಲ್ಲದೆ, ಆರ್‌ಎಸ್‌ಇಟಿಐ ಕಾರ್ಯ ನಿರ್ವಹಣೆಗೆ ತಾತ್ಕಾಲಿಕ ಆವರಣ ಮಂಜೂರು ಮಾಡುವಂತೆಯೂ ಬ್ಯಾಂಕ್ ಮನವಿ ಮಾಡಿತ್ತು ಎಂದು ಎಸ್‌ಎಲ್‌ಬಿಸಿಯ ಸಂಚಾಲಕರು ಸಭೆಗೆ ತಿಳಿಸಿದರು.

ಈ ವಿಷಯದಲ್ಲಿ ರಾಜ್ಯ ಸರ್ಕಾರದ ಮಧ್ಯಪ್ರವೇಶ ಮಾಡಬೇಕು ಎಂದು ಎಸ್‌ಎಲ್‌ಬಿಸಿ ಸಭೆಯಲ್ಲಿ ಮನವಿ ಮಾಡಿತು.

**(ಕ್ರಮ: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೌಶಲ್ಯ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ)**

**ಕಾರ್ಯಸೂಚಿ ವಿಷಯ ಸಂಖ್ಯೆ – 9**

**ಕಿಸಾನ್ ಕ್ರೆಡಿಟ್ ಕಾರ್ಡ್ ಸಾಲಗಳಿಗೆ 1% ಬಡ್ಡಿ ಸಹಾಯಧನ(ರಿಯಾಯಿತಿ):**

ಕರ್ನಾಟಕ ಸರ್ಕಾರವು ಕಿಸಾನ್ ಕ್ರೆಡಿಟ್ ಕಾರ್ಡ್(ಕೆಸಿಸಿ) ಸಾಲವನ್ನು ಪ್ರಾಮಾಣಿಕವಾಗಿ ಸಕಾಲದಲ್ಲಿ ಮರುಪಾವತಿ ಮಾಡುವ ರೈತರಿಗೆ 1 ಲಕ್ಷ ರೂ.ವರೆಗಿನ ಬೆಳೆ ಸಾಲ(ಕೆಸಿಸಿ)ಗಳಿಗೆ 1% ಬಡ್ಡಿ ರಿಯಾಯಿತಿ ಒದಗಿಸುತ್ತಿದೆ ಎಂದು ಉಪಸಂಚಾಲಕರು ಮಾಹಿತಿ ನೀಡಿದರು. ಆದರೆ, ಕಳೆದ 3 ವರ್ಷಗಳಿಂದ ಕೃಷಿ ಇಲಾಖೆಯಿಂದ 26 ಕೋಟಿ ರೂ. ಬಡ್ಡಿ ಸಹಾಯಧನ ಬಂದಿಲ್ಲ ಎಂದರು.

ಬಾಕಿ ಉಳಿದಿರುವ ಶೇ.1ರ ಬಡ್ಡಿ ಸಹಾಯಧನವನ್ನು ಶೀಘ್ರ ಪಾವತಿಸುವಂತೆ ಸಭಾಧ್ಯಕ್ಷರು ಕೃಷಿ ಇಲಾಖೆಗೆ ಸೂಚನೆ ನೀಡಿದರು.

**(ಕ್ರಮಗಳು: ಕೃಷಿ ಇಲಾಖೆ)**

**ಕಾರ್ಯಸೂಚಿ ವಿಷಯ ಸಂಖ್ಯೆ – 10**

**ಸ್ವಾಮಿತ್ವ(ಗ್ರಾಮೀಣ ಪ್ರದೇಶಗಳಲ್ಲಿ ಸುಧಾರಿತ ತಂತ್ರಜ್ಞಾನದೊಂದಿಗೆ ಗ್ರಾಮಗಳ ಸಮೀಕ್ಷೆ ಮತ್ತು ನಕ್ಷೆ) ಯೋಜನೆ:**

ಸ್ವಾಮಿತ್ವ ಯೋಜನೆ ಅಡಿ, ನೀಡಲಾದ ಆಸ್ತಿ ಕಾರ್ಡ್‌ಗಳಿಗೆ ಷರತ್ತುರಹಿತ ವರ್ಗಾವಣೆಯ ಹಕ್ಕುಗಳಿರುವ ಸಂಪೂರ್ಣ ಮಾಲೀಕತ್ವ ಹಕ್ಕುಗಳನ್ನು ನೀಡಲು

ಅಗತ್ಯವಾದ ಶಾಸನಾತ್ಮಕ ಬದಲಾವಣೆಗಳನ್ನು ತರುವಂತೆ ಸಂಚಾಲಕರು ರಾಜ್ಯ ಸರ್ಕಾರದ ಇಲಾಖೆಗೆ ಮನವಿ ಮಾಡಿದರು.

ಈ ಹಂತದಲ್ಲಿ ರಾಜ್ಯದ ಕಾನೂನಿಗೆ ತಿದ್ದುಪಡಿ ತರುವುದು ಅಪಕ್ವವಾಗಲಿದೆ ಅಥವಾ ಅವಸರದ ಕ್ರಮವಾಗಲಿದೆ ಎಂದು ಕರ್ನಾಟಕ ಸರ್ಕಾರದ ಸರ್ವೆ ಇಲಾಖೆ ಆಯುಕ್ತರು ಉತ್ತರಿಸಿದರು. ಒಮ್ಮೆ ರಾಜ್ಯದ 60-70% ಹಳ್ಳಿಗಳು ವ್ಯಾಪ್ತಿಗೆ ಬಂದರೆ, ನಂತರದ ಹಂತದಲ್ಲಿ ಸ್ವಾಮಿತ್ವ ಯೋಜನೆಯನ್ನು(ಕಾನೂನಿಗೆ ತಿದ್ದುಪಡಿ ತರಬಹುದು) ಜಾರಿಗೊಳಿಸಬಹುದು ಎಂದರು.

**(ಕ್ರಿಯೆ: ಎಸ್‌ಎಸ್‌ಎಲ್‌ಆರ್ ವಿಭಾಗ. ಕರ್ನಾಟಕ ಸರ್ಕಾರ)**

**ಕಾರ್ಯಸೂಚಿ ವಿಷಯ ಸಂಖ್ಯೆ – 11**

**ಮುದ್ರಾಂಕ ಸುಂಕ ಶುಲ್ಕಗಳು:**

ಇತ್ತೀಚೆಗೆ ಎಲ್ಲಾ ವಿಧದ ಸಾಲಗಳಿಗೆ ಮುದ್ರಾಂಕ ಸುಂಕ ಶುಲ್ಕ ಹೆಚ್ಚಿಸಲಾಗಿದೆ ಎಂದು ಕೆಲವು ಸದಸ್ಯ ಬ್ಯಾಂಕ್‌ಗಳು 165ನೇ ಎಸ್‌ಎಲ್‌ಬಿಸಿ ಪ್ರಗತಿ ಪರಾಮರ್ಶೆ ಸಮಿತಿ ಸಭೆಯಲ್ಲಿ ಎಸ್‌ಎಲ್‌ಬಿಸಿ ಗಮನಕ್ಕೆ ತಂದಿವೆ. ಇದು ಗ್ರಾಹಕರಿಗೆ ಅನನುಕೂಲತೆ ಮತ್ತು ಆರ್ಥಿಕ ಹೊರೆ ಉಂಟುಮಾಡುತ್ತಿದೆ ಎಂದು ಉಪಸಂಚಾಲಕರು ಮಾಹಿತಿ ನೀಡಿದರು. ಈ ಬಗ್ಗೆ ರಾಜ್ಯ ಸರಕಾರ ಪರಿಶೀಲನೆ ನಡೆಸಬೇಕು ಎಂದು ಮನವಿ ಮಾಡಿದರು.

ಎಸ್‌ಎಲ್‌ಬಿಸಿಯು ಈ ಸಮಸ್ಯೆಯನ್ನು ಕಂದಾಯ ಇಲಾಖೆಯ ಗಮನಕ್ಕೆ ತರಲಾಗಿದೆ. ರಾಜ್ಯ ಸರ್ಕಾರ ಮಧ್ಯಪ್ರವೇಶಿಸಬೇಕು ಎಂದು ಮನವಿ ಮಾಡಲಾಗಿದೆ ಎಂದು ಉಪಸಂಚಾಲಕರು ಮಾಹಿತಿ ನೀಡಿದರು.

ಈ ಸಮಸ್ಯೆ ಬಗೆಹರಿಸಲು ನೋಂದಣಿ ಮತ್ತು ಮುದ್ರಾಂಕ ಇಲಾಖೆ(ಐಜಿಆರ್) ಮತ್ತು ಕಂದಾಯ ಇಲಾಖೆಯ ಜಂಟಿ ಸಭೆ ಕರೆಯಲಾಗುವುದು ಎಂದು ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಸಭೆಗೆ ತಿಳಿಸಿದರು.

**(ಕ್ರಮ: ರಾಜ್ಯ ಸರ್ಕಾರ)**

**ಕಾರ್ಯಸೂಚಿ ವಿಷಯ ಸಂಖ್ಯೆ – 12**

**ಕ್ಲೇಮು ಪಡೆಯದ ಠೇವಣಿಗಳು(ಡೀಫ್):**

ಎಲ್ಲಾ ಬ್ಯಾಂಕ್‌ಗಳು ಕ್ಲೇಮು ಮಾಡದ ಠೇವಣಿ(ಠೇವಣಿದಾರರ ಶಿಕ್ಷಣ ಮತ್ತು ಜಾಗೃತಿ ನಿಧಿ- DEAF) ಗಳನ್ನು ಸಾಧ್ಯವಾದಷ್ಟು ಬೇಗ ಪಾವತಿಸಸಬೇಕು ಎಂದು ಹಣಕಾಸು ಇಲಾಖೆಯ ಕಾರ್ಯದರ್ಶಿ ಡಾ. ಆರ್ ವಿಶಾಲ್ ಸೂಚಿಸಿದರು.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕ್‌ಗಳು)**

**ಕಾರ್ಯಸೂಚಿ ವಿಷಯ ಸಂಖ್ಯೆ – 13**

**ಕರ್ನಾಟಕ ಸರ್ಕಾರಕ್ಕೆ ಡಿಡಿ, ಪೇ ಆರ್ಡರ್ ರೂಪದಲ್ಲಿ ಸಂಗ್ರಹಿಸಲಾದ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕ:**

ಕರ್ನಾಟಕ ಸರ್ಕಾರದ ಪ್ರಧಾನ ಅಥವಾ ಪ್ರಮುಖ ಖಾತೆ("ಹೆಡ್ ಆಫ್ ಅಕೌಂಟ್ಸ್ 0030")ಗೆ ಡಿಡಿ ಅಥವಾ ಪೇ ಆರ್ಡರ್ ರೂಪದಲ್ಲಿ ವಿಳಂಬವಾಗಿ ಸಂಗ್ರಹಿಸಿರುವ ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕಕ್ಕೆ ಸಂಬಂಧಿಸಿದ 41.56 ಕೋಟಿ ರೂ. ಬಡ್ಡಿ ಹಣ ಪಾವತಿಸುವಂತೆ ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರು ಬರೆದಿರುವ ಪತ್ರವನ್ನು ಎಸ್‌ಎಲ್‌ಬಿಸಿ ಸ್ವೀಕರಿಸಿದೆ ಎಂದು ಉಪಸಂಚಾಲಕರು ಸಭೆಗೆ ಮಾಹಿತಿ ನೀಡಿದರು. ಇದಕ್ಕೆ ಸಂಬಂಧಿಸಿದಂತೆ,

ಬೆಂಗಳೂರಿನ ಇನ್‌ಸ್ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್(ಐಜಿಆರ್) ಮತ್ತು ಕಮಿಷನರ್ ಆಫ್ ಸ್ಟಾಂಪ್ ಕಚೇರಿಯು ಪತ್ರ ಸಂಖ್ಯೆ ಆರ್‌ಐಸಿ 09 2019-20 ದಿನಾಂಕ 19.09.2018 ಮತ್ತು 11.03.2019ರಂದು ಪತ್ರ ಬರೆದಿದೆ. ಕರ್ನಾಟಕ ಸರ್ಕಾರದ "ಹೆಡ್ ಆಫ್ ಅಕೌಂಟ್ 0030" ಖಾತೆಗೆ ಡಿಮ್ಯಾಂಡ್ ಡ್ರಾಫ್ಟ್, ಪೇ ಆರ್ಡರ್ ರೂಪದಲ್ಲಿ ವಿಳಂಬವಾಗಿ ಸಂಗ್ರಹಿಸಲಾಗಿರುವ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕಗಳಿಗೆ 55.25 ಕೋಟಿ ರೂ. ಬಡ್ಡಿ ಹಣ ಪಾವತಿಸಬೇಕು ಎಂದು ಪತ್ರದಲ್ಲಿ ಒತ್ತಾಯಿಸಿದೆ ಎಂದು ಅವರು ಸಭೆಯ ಗಮನಕ್ಕೆ ತಂದರು.

ಇದಲ್ಲದೆ, ಈ ಪತ್ರಕ್ಕೆ ಪ್ರತಿಸ್ಪಂದನೆಯಾಗಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ 09.01.2017ರಂದು 4.46 ಕೋಟಿ ರೂ. ಹಾಗೂ 27.10.2022ರಂದು 9.23 ಕೋಟಿ ರೂ. ಬಡ್ಡಿ ಹಣ ಪಾವತಿಸಿದೆ. ಇನ್ನೂ ಪಾವತಿಸಲು 41.56 ಕೋಟಿ ರೂ. ಬಾಕಿ ಉಳಿದಿದೆ ಎಂದು ವಿವರ ನೀಡಿದರು.

**(ಕ್ರಮ: ಎಸ್‌ಬಿಐ)**

**ಕಾರ್ಯಸೂಚಿ ವಿಷಯ ಸಂಖ್ಯೆ - 15**

**ಕಾರ್ಯಸೂಚಿ 15.1 ನಿಗದಿತ ಉದ್ದೇಶಕ್ಕಾಗಿ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಿಗೆ ಒದಗಿಸಲಾದ ಸಾಲದ ಬಳಕೆಯ ಮೇಲ್ವಿಚಾರಣೆ**

ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಿಗೆ ಸಾಲದ ಅಡಿಯಲ್ಲಿ ಬಾಕಿ ಇರುವ ಸರಾಸರಿ ಮೊತ್ತದ ಕುರಿತಾಗಿ 'ಆರ್‌ಬಿಐ', ಕೇಂದ್ರ ಕಚೇರಿ ನಡೆಸಿದ ಸಮೀಕ್ಷೆಯನ್ನು ಪ್ರಾದೇಶಿಕ ನಿರ್ದೇಶಕರು (ಆರ್‌ಡಿ) ಹಂಚಿಕೊಂಡರು.

'ಕೆಸಿಸಿ' ಸೇರಿದಂತೆ ನಿಗದಿತ ಉದ್ದೇಶಕ್ಕಾಗಿ ವಿವಿಧ ರೀತಿಯ ಯೋಜನೆಗಳಲ್ಲಿ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಿಗೆ ಒದಗಿಸಲಾದ ಸಾಲದ ಬಳಕೆ ಹಾಗೂ ರಿಯಾಯಿತಿ ಯೋಜನೆ, ಸಬ್ಸಿಡಿಗಳು, ಇತರೆ ಉಪಕ್ರಮಗಳ ಅಡಿಯಲ್ಲಿ ಅರ್ಹ

ಮೊತ್ತದ ಮರುಪಾವತಿ ಬಗ್ಗೆ ಮೇಲ್ವಿಚಾರಣೆ ನಡೆಸುವಂತೆ ಪ್ರಾದೇಶಿಕ ನಿರ್ದೇಶಕರು ಬ್ಯಾಂಕುಗಳನ್ನು ಒತ್ತಾಯಿಸಿದರು. ಇದಲ್ಲದೆ, ರಾಜ್ಯ ಸರ್ಕಾರ ಬಿಡುಗಡೆ ಮಾಡಿದ ಬರ ಪರಿಹಾರ ನಿಧಿ, ಇತರ ಪರಿಹಾರ ನಿಧಿಯನ್ನು ಆಯಾ ಗ್ರಾಹಕರಿಂದ ಒಪ್ಪಿಗೆ ಪಡೆಯದೆ ಬಾಕಿ ಇರುವ ಸಾಲಗಳ ವಿರುದ್ಧ ಬ್ಯಾಂಕುಗಳು ಸ್ವಯಂಚಾಲಿತವಾಗಿ ಜಮೆ ಮಾಡದಂತೆ 'ಎಸ್‌ಎಲ್‌ಬಿಸಿ' ಖಚಿತಪಡಿಸಿಕೊಳ್ಳಬೇಕು ಎಂದು ಸೂಚಿಸಿದರು.

**(ಕ್ರಮ: 'ಎಸ್‌ಎಲ್‌ಬಿಸಿ' ಮತ್ತು ಎಲ್ಲಾ ಬ್ಯಾಂಕುಗಳು)**

**ಕಾರ್ಯಸೂಚಿ 15.2 ಕರ್ನಾಟಕದಲ್ಲಿ ಬ್ಯಾಂಕಿಂಗ್ ಸೌಲಭ್ಯವಿಲ್ಲದ ಗ್ರಾಮೀಣ ಕೇಂದ್ರಗಳು**

ರಾಜ್ಯದ ಎಲ್ಲಾ ಬ್ಯಾಂಕಿಂಗ್ ರಹಿತ ಗ್ರಾಮೀಣ ಕೇಂದ್ರಗಳನ್ನು (ಯುಆರ್‌ಸಿ) ಗುರುತಿಸಲು, ಅಂತಹ ಎಲ್ಲಾ ಕೇಂದ್ರಗಳ ನವೀಕರಿಸಿದ ಪಟ್ಟಿಯನ್ನು ಸಿದ್ಧಪಡಿಸಲು ಮತ್ತು ನಿರ್ವಹಿಸಲು 'ಎಸ್‌ಎಲ್‌ಬಿಸಿ' ಸಂಚಾಲಕ ಬ್ಯಾಂಕ್‌ಗೆ ಸೂಚಿಸಲಾಗಿದೆ ಎಂದು ಪ್ರಾದೇಶಿಕ ನಿರ್ದೇಶಕರು ಮಾಹಿತಿ ನೀಡಿದರು. ಬ್ಯಾಂಕುಗಳು 'ಬ್ಯಾಂಕಿಂಗ್ ಮಳಿಗೆ' ತೆರೆಯಲು ಬಯಸುವ ಸ್ಥಳ ಅಥವಾ ಕೇಂದ್ರವನ್ನು ಆಯ್ಕೆ ಮಾಡಲು ಅಥವಾ ಸೂಚಿಸಲು ಅನುಕೂಲವಾಗುವಂತೆ ನವೀಕರಿಸಿದ ಪಟ್ಟಿಯನ್ನು 'ಎಸ್‌ಎಲ್‌ಬಿಸಿ' ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಬೇಕು ಎಂದು ಸೂಚಿಸಿದರು.

ಇದಲ್ಲದೆ, ಹಣಕಾಸು ಸೇವೆಗಳ ಇಲಾಖೆ ನಿರ್ವಹಿಸುವ ಜನ 'ದರ್ಶಕ್' ಪೋರ್ಟಲ್ ಆಧಾರದ ಮೇಲೆ ಬ್ಯಾಂಕಿಂಗ್ ವ್ಯವಸ್ಥೆ ಇಲ್ಲದ ಗ್ರಾಮಗಳ ವಿವರವನ್ನು ಅಪ್ಲೋಡ್ ಮಾಡುವ ಬದಲು ಅಸ್ತಿತ್ವದಲ್ಲಿರುವ 'ಆರ್‌ಬಿಐ' ಸೂಚನೆಗಳ ಆಧಾರದ ಮೇಲೆ ' ಬ್ಯಾಂಕಿಂಗ್ ಸೌಲಭ್ಯವಿಲ್ಲದ ಗ್ರಾಮೀಣ ಕೇಂದ್ರಗಳ(ಯುಆರ್‌ಸಿ'ಗಳು)

ದತ್ತಾಂಶವನ್ನು 'ಎಸ್‌ಎಲ್‌ಬಿಸಿ' ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಲು 'ಎಸ್‌ಎಲ್ ಬಿಸಿ'ಗೆ ಆರ್.ಡಿ. ಸಲಹೆ ನೀಡಿದರು.

**(ಕ್ರಮ: 'ಎಸ್‌ಎಲ್‌ಬಿಸಿ' )**

**ಕಾರ್ಯಸೂಚಿ 15.3 ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿ ಸಭೆಗಳು**

ಜಿಲ್ಲಾ ಮಟ್ಟದ ಸಾಲ ಯೋಜನೆಗಳನ್ನು ಪರಿಶೀಲಿಸಲು ಮತ್ತು ಅರ್ಹ ವಲಯಗಳಿಗೆ ಸಾಲ ನೀಡಿಕೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕಾರ್ಯತಂತ್ರಗಳನ್ನು ರೂಪಿಸಲು ಮಧ್ಯಸ್ಥಗಾರರಿಗೆ ವೇದಿಕೆಯಾಗಿ ಕಾರ್ಯನಿರ್ವಹಿಸುವ ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿ ('ಡಿಎಲ್‌ಆರ್‌ಸಿ') ಸಭೆಗಳ ಪ್ರಾಮುಖ್ಯತೆಯ ಬಗ್ಗೆ 'ಆರ್‌ಬಿಐ'ನ ಪ್ರಾದೇಶಿಕ ನಿರ್ದೇಶಕರು ಸದನದ ಗಮನ ಸೆಳೆದರು. ಹೆಚ್ಚುವರಿಯಾಗಿ, 'ಡಿಎಲ್‌ಆರ್‌ಸಿ'ಗಳು ಒಟ್ಟಾರೆ ಕಾರ್ಯತಂತ್ರವನ್ನು ಸುಧಾರಿಸಲು ಸಾರ್ವಜನಿಕ ಪ್ರತಿನಿಧಿಗಳಿಗೆ ತಮ್ಮ ಪ್ರತಿಕ್ರಿಯೆಯನ್ನು ಹಂಚಿಕೊಳ್ಳಲು ಅವಕಾಶ ಒದಗಿಸುತ್ತವೆ. ಕರ್ನಾಟಕ ರಾಜ್ಯದ ಸಾರ್ವಜನಿಕ ಪ್ರತಿನಿಧಿಗಳ ಹಾಜರಾತಿ ಪ್ರಮಾಣ ಕಳವಳಕಾರಿಯಾಗಿದ್ದು, ಕಳೆದ ಎಂಟು ತ್ರೈಮಾಸಿಕಗಳಲ್ಲಿ 'ಡಿಎಲ್‌ಆರ್‌ಸಿ' ಸಭೆಗಳಲ್ಲಿ ಕೇವಲ ಶೇ. 16 ಪ್ರತಿನಿಧಿಗಳು ಮಾತ್ರ ಭಾಗವಹಿಸಿದ್ದಾರೆ ಎಂದು ಅವರು ಹೇಳಿದರು. ಈ ಹಿನ್ನೆಲೆಯಲ್ಲಿ 'ಲೀಡ್ ಡಿಸಿಎಂ' ಮತ್ತು 'ಡಿಎಲ್‌ಆರ್‌ಸಿ' ಸಭೆಗಳನ್ನು ನಿಗದಿತ ಕಾಲಮಿತಿಯೊಳಗೆ ಪ್ರತ್ಯೇಕವಾಗಿ ನಡೆಸಬೇಕು ಎಂದು ಪ್ರಾದೇಶಿಕ ನಿರ್ದೇಶಕರು ಸೂಚಿಸಿದರು.

**(ಕ್ರಮ: ಎಲ್ಲಾ 'ಎಲ್‌ಡಿಎಂ'ಗಳು)**

**ಕಾರ್ಯಸೂಚಿ 15.4 'ಎಲ್‌ಬಿಎಸ್' ಫೋರಾ ಸಭೆಗಳು**

ಕೊಡಗು, ಬೀದರ್ ಜಿಲ್ಲೆಗಳಿಗೆ ಸಂಬಂಧಿಸಿದ ಜೂನ್ 2024ರ 'ಕ್ಯೂಇ'ಗೆ ಸಂಬಂಧಿಸಿದಂತೆ 'ಡಿಸಿಸಿ', 'ಡಿಎಲ್ಆರ್‌ಸಿ' ಸಭೆಗಳನ್ನು ಎರಡು ಬಾರಿ ಮರುನಿಗದಿಪಡಿಸಿ, ಕೊನೆಗೆ ಮುಂದೂಡಲಾಗಿದೆ. ರಾಯಚೂರು ಜಿಲ್ಲೆಯ ಮತ್ತೊಂದು ಡಿಸಿಸಿ ಮತ್ತು 'ಡಿಎಲ್ಆರ್‌ಸಿ'ಯನ್ನು ಜಿಲ್ಲೆಯ 'ಎಲ್‌ಡಿಒ'ಗೆ ಮಾಹಿತಿ ನೀಡದೆ ನಡೆಸಲಾಯಿತು ಎಂದು 'ಆರ್‌ಬಿಐ' ಪ್ರಾದೇಶಿಕ ನಿರ್ದೇಶಕರು 'ಎಸ್‌ಎಲ್ ಬಿಸಿ' ಗಮನಕ್ಕೆ ತಂದರು.  ಸದಸ್ಯರ ಭಾಗವಹಿಸುವಿಕೆಗೆ ಅನುಕೂಲವಾಗುವಂತೆ ಎಲ್ಲಾ ಮಧ್ಯಸ್ಥಗಾರರಿಗೆ ಮುಂಚಿತವಾಗಿ ತಿಳಿಸುವ ಬಗ್ಗೆ ಎಲ್ಲಾ 'ಎಲ್‌ಡಿಎಂ'ಗಳನ್ನು ಸಂವೇದನಾಶೀಲಗೊಳಿಸುವಂತೆ 'ಎಸ್‌ಎಲ್‌ಬಿಸಿ'ಗೆ ಸಲಹೆ ನೀಡಲಾಯಿತು.

**(ಕ್ರಮ: ಎಲ್ಲಾ 'ಎಲ್‌ಡಿಎಂ'ಗಳು, 'ಎಸ್‌ಎಲ್‌ಬಿಸಿ' )**

**ಕಾರ್ಯಸೂಚಿ 15.5: ಕರ್ನಾಟಕದ ಬೆಳಗಾವಿ ಜಿಲ್ಲೆ, ಹುಕ್ಕೇರಿ ತಾಲೂಕಿನ ಯೆಲಿಮುನ್ನೋಳಿ ಗ್ರಾಮ ಪಂಚಾಯಿತಿಯಲ್ಲಿ ಬ್ಯಾಂಕಿಂಗ್ ಮಳಿಗೆ ತೆರೆಯಲು ಮನವಿ**

5 ಕಿ.ಮೀ. ವ್ಯಾಪ್ತಿಯಲ್ಲಿ 7 ಶಾಖೆಗಳು ಅಸ್ತಿತ್ವದಲ್ಲಿರುವುದರಿಂದ ಸದರಿ ಗ್ರಾಮದಲ್ಲಿ ಭೌತಿಕ ಶಾಖೆ ತೆರೆಯುವುದು ಕಾರ್ಯಸಾಧುವಲ್ಲ ಎಂಬ 'ಆರ್‌ಬಿಐ' ಸಲಹೆಯಂತೆ ಕೈಗೊಂಡ ಕ್ರಮದ ವರದಿಯನ್ನು(ಎಟಿಆರ್) 'ಎಸ್‌ಎಲ್‌ಬಿಸಿ'  ಸಲ್ಲಿಸಿದೆ.

**ಕಾರ್ಯಸೂಚಿ 15.6 ವ್ಯವಹಾರ ಪ್ರತಿನಿಧಿಗಳಿಗೆ ಪಾವತಿಸಿದ ಕಮಿಷನ್, ಶುಲ್ಕದ ಪರಿಶೀಲನೆ**

ಪ್ರಾದೇಶಿಕ ನಿರ್ದೇಶಕರು ವ್ಯವಹಾರ ಪ್ರತಿನಿಧಿಗಳ ಕಮಿಷನ್(ಗಳಿಕೆ ಹಣ) ಪರಿಶೀಲಿಸಲು ಮತ್ತು ಅಸ್ತಿತ್ವದಲ್ಲಿರುವ ಮಾರ್ಗಸೂಚಿಗಳ ಪ್ರಕಾರ ಸಂಭಾವನೆ ನಿಗದಿಪಡಿಸಲು ಬ್ಯಾಂಕುಗಳಿಗೆ ಸಲಹೆ ನೀಡಿದರು. ಸಂಭಾವನೆಯು ಸ್ಥಿರ ಮತ್ತು ಅನಿಶ್ಚಿತ ಘಟಕಗಳನ್ನು ಒಳಗೊಂಡಿರಬೇಕು ಹಾಗೂ ಗ್ರಾಹಕರ ತೃಪ್ತಿಯ ಕೆಲವು

ಸೂಚಕಗಳು ಅಥವಾ ಅಳತೆಗಳ ಮೇಲೆ ಅವಲಂಬಿತವಾಗಿರಬೇಕು. ಕಾರ್ಪೊರೇಟ್ ಏಜೆಂಟ್ ಅಸ್ತಿತ್ವದಲ್ಲಿರುವ ಮಾರ್ಗಸೂಚಿಗಳಿಗೆ ಬದ್ಧವಾಗಿರುವುದನ್ನು ಬ್ಯಾಂಕ್ ಖಚಿತಪಡಿಸಿಕೊಳ್ಳಬೇಕು. ಜೊತೆಗೆ ಎಲ್ಲಾ ನಿಯಂತ್ರಣ ಮುಖ್ಯಸ್ಥರು ಅದನ್ನು ಮೇಲ್ವಿಚಾರಣೆ ಮಾಡಬೇಕೆಂದ ನಿರೀಕ್ಷಿಸಲಾಗಿದೆ ಎಂದು ಸಲಹೆ ನೀಡಿದರು.

ರಾಜ್ಯದಲ್ಲಿ ಪ್ರಮಾಣೀಕೃತ 'ಬಿ.ಸಿ'ಗಳ ಶೇಕಡಾವಾರು ಸಂಖ್ಯೆ (15.06%) ಕಡಿಮೆ ಇರುವ ಬಗ್ಗೆ 'ಆರ್.ಡಿ' ಕಳವಳ ವ್ಯಕ್ತಪಡಿಸಿದರು ಮತ್ತು ಈ ವಿಷಯವನ್ನು ಪರಿಶೀಲಿಸಲು ಮತ್ತು ಶೇಕಡಾವಾರು ಪ್ರಮಾಣವನ್ನು ಸುಧಾರಿಸಲು ಬ್ಯಾಂಕುಗಳು, 'ಎಸ್ಎಲ್‌ಬಿಸಿ' ಯನ್ನು ಒತ್ತಾಯಿಸಿದರು.

**(ಕ್ರಮ: 'ಎಸ್ಎಲ್‌ಬಿಸಿ' ಮತ್ತು ಎಲ್ಲಾ ಬ್ಯಾಂಕುಗಳು)**

**ಕಾರ್ಯಸೂಚಿ 15.7 ಶಾಖೆ ಮಟ್ಟದಲ್ಲಿ ಎಸಿಪಿ ಗುರಿಗಳ ಅರಿವು**

ಹೆಚ್ಚಿನ ಸಂದರ್ಭಗಳಲ್ಲಿ ಶಾಖಾ ವ್ಯವಸ್ಥಾಪಕರಿಗೆ ತಮ್ಮ 'ಎಸಿಪಿ' ಗುರಿಗಳ ಬಗ್ಗೆ ಅರಿವಿರುವುದಿಲ್ಲ ಎಂದು ಪ್ರಾದೇಶಿಕ ನಿರ್ದೇಶಕರು ದಿಗ್ಭ್ರಮೆ ವ್ಯಕ್ತಪಡಿಸಿದರು. ಏಪ್ರಿಲ್ 1, 2024ರ 'ಲೀಡ್ ಬ್ಯಾಂಕ್ ಯೋಜನೆ'ಯ ಮಾಸ್ಟರ್ ಸುತ್ತೋಲೆಯಲ್ಲಿ ವಿವರಿಸಿದಂತೆ ಎಲ್ಲಾ ಬ್ಯಾಂಕುಗಳು ತಮ್ಮ ಆಂತರಿಕ ವ್ಯವಹಾರ ಯೋಜನೆಗಳನ್ನು 'ಎಸಿಪಿ'ಯೊಂದಿಗೆ ಹೊಂದಿಸಿಕೊಳ್ಳುವುದನ್ನು ಖಚಿತಪಡಿಸಲು ಸೂಚಿಸಲಾಗಿದೆ.

**(ಕ್ರಮ: ಎಲ್ಲಾ ಬ್ಯಾಂಕುಗಳು)**

**ಕಾರ್ಯಸೂಚಿ 15.8 'ಎಂಎಸ್ಎಂಇ' ಕ್ಲಸ್ಟರ್ ಹಣಕಾಸು**

ಕ್ಲಸ್ಟರ್ ಫೈನಾನ್ಸಿಂಗ್" ಬಗ್ಗೆ ಅನ್ವೇಷಿಸಲು 'ಆರ್‌ಬಿಐ' ಜುಲೈ 10, 2024ರಂದು ಕೆನರಾ ಬ್ಯಾಂಕ್, ಎಸ್ಬಿಐ ಮತ್ತು ಬ್ಯಾಂಕ್ ಆಫ್ ಬರೋಡಾ ಪ್ರತಿನಿಧಿಗಳು ಹಾಗೂ

‘ಎಸ್‌ಎಲ್ಬಿಸಿ’, ಎಸ್‌ಐಡಿಬಿಐ, ಡಿಐಸಿ ಮತ್ತು ‘ಎಂಎಸ್‌ಎಂಇ-ಡಿಎಫ್‌ಒ’ ಪ್ರತಿನಿಧಿಗಳೊಂದಿಗೆ ಬೆಂಗಳೂರಿನಲ್ಲಿ ಸಭೆ ನಡೆಸಿತ್ತು. ‘ಎಸ್‌ಎಲ್ಬಿಸಿ’ಯ ಪಾಲ್ಗೊಳ್ಳುವಿಕೆಯಿಂದ ‘ಎಸ್‌ಎಂಇ’ಗಳಿಗೆ ಹಣಕಾಸು ಒದಗಿಸಲು ಕ್ಲಸ್ಟರ್ ಆಧಾರಿತ ವಿಧಾನವನ್ನು ಅಳವಡಿಸಿಕೊಳ್ಳಲು ಬ್ಯಾಂಕುಗಳಿಗೆ ಅನುಕೂಲವಾಗಲಿದೆ ಎಂದು ನಿರೀಕ್ಷಿಸಲಾಗಿದೆ ಎಂದು ಪ್ರಾದೇಶಿಕ ನಿರ್ದೇಶಕರು ಹೇಳಿದರು.

**(ಕ್ರಮ: ‘ಎಸ್‌ಎಲ್‌ಬಿಸಿ’ ಮತ್ತು ಎಲ್ಲಾ ಬ್ಯಾಂಕುಗಳು)**

**ಕಾರ್ಯಸೂಚಿ 15.9 ಬ್ಯಾಂಕುಗಳಿಂದ ‘ಆರ್ಥಿಕ ಸಾಕ್ಷರತಾ ಶಿಬಿರ’**

ಕಾಲಕಾಲಕ್ಕೆ ‘ಹಣಕಾಸು ಸಾಕ್ಷರತಾ ಶಿಬಿರಗಳ’ನ್ನು(ಎಫ್‌ಎಲ್‌ಸಿ) ನಡೆಸುವುದಕ್ಕೆ ಸಂಬಂಧಿಸಿದಂತೆ ಕೆಲವು ಗ್ರಾಮೀಣ ಬ್ಯಾಂಕ್ ಶಾಖೆಗಳು ‘ಆರ್‌ಬಿಐ’ ಮಾರ್ಗಸೂಚಿಗಳನ್ನು ಅನುಸರಿಸುತ್ತಿಲ್ಲ ಎಂದು ಪ್ರಾದೇಶಿಕ ನಿರ್ದೇಶಕರು ಮಾಹಿತಿ ನೀಡಿದರು. ಅಸ್ತಿತ್ವದಲ್ಲಿರುವ ಮಾರ್ಗಸೂಚಿಗಳ ಪ್ರಕಾರ, ಗ್ರಾಮೀಣ ಶಾಖೆಗಳು ತಿಂಗಳಿಗೆ ಒಂದು ‘ಎಫ್‌ಎಲ್‌ಸಿ’ ನಡೆಸಬೇಕಾಗುತ್ತದೆ, ನಿರ್ದಿಷ್ಟವಾಗಿ ಪ್ರತಿ ತಿಂಗಳ ಮೂರನೇ ಶುಕ್ರವಾರದಂದು ಶಾಖೆಯ ಸಮಯದ ನಂತರ ಇದನ್ನು ನಡೆಸಬೇಕು. ‘ಆರ್‌ಬಿಐ’ನ ಪ್ರಮುಖ ಜಿಲ್ಲಾ ಅಧಿಕಾರಿಗಳು (ಎಲ್‌ಡಿಒಗಳು) ಇತ್ತೀಚೆಗೆ ಗ್ರಾಮೀಣ ಶಾಖೆಗಳಿಗೆ ಭೇಟಿ ನೀಡಿದಾಗ, ಕೆಲವು ಶಾಖೆಗಳು ಈ ಮಾರ್ಗಸೂಚಿಗಳನ್ನು ಅನುಸರಿಸುತ್ತಿಲ್ಲ ಎಂಬುದು ಗಮನಕ್ಕೆ ಬಂದಿದೆ. ಬ್ಯಾಂಕುಗಳಿಗೆ ಈ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ಸೂಚಿಸಲಾಗಿದೆ.

**(ಕ್ರಮ: ಎಲ್ಲಾ ಬ್ಯಾಂಕುಗಳು)**

**ಕಾರ್ಯಸೂಚಿ 15.10 ಖಾಲಿ ಇರುವ ‘ಹಣಕಾಸು ಸಾಕ್ಷರತಾ ಸಲಹೆಗಾರ’ರ ನೇಮಕಾತಿ**

ಆರ್ಥಿಕ ಸಾಕ್ಷರತೆಯನ್ನು ಬಲಪಡಿಸುವಲ್ಲಿ 'ಹಣಕಾಸು ಸಾಕ್ಷರತಾ ಸಲಹೆಗಾರರು' ('ಎಫ್‌ಎಲ್‌ಸಿ') ಬಹಳ ಮುಖ್ಯವಾದ ಪಾತ್ರ ವಹಿಸುತ್ತಾರೆ ಎಂದು 'ಆರ್‌ಬಿಐ'ನ ಪ್ರಾದೇಶಿಕ ನಿರ್ದೇಶಕರು ಮಾಹಿತಿ ನೀಡಿದರು. ಹಣಕಾಸು ಸಾಕ್ಷರತೆ ಸಲಹೆಗಾರರ ತ್ವರಿತ ನೇಮಕಾತಿಗೆ ಬ್ಯಾಂಕುಗಳು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು. ಎಸ್ ಬಿಐ, ಯುಬಿಐ, ಬಿಒಬಿ ಮತ್ತು ಬಿಒಐ ಬ್ಯಾಂಕ್‌ಗಳು ಆದಷ್ಟು ಬೇಗ ಹಣಕಾಸು ಸಲಹೆಗಾರರನ್ನು ನೇಮಿಸಿಕೊಳ್ಳಬೇಕು ಎಂದು ಒತ್ತಾಯಿಸಲಾಯಿತು.

**(ಕ್ರಮ: ಎಸ್‌ಬಿಐ, ಯುಬಿಐ, ಬಿಒಬಿ ಮತ್ತು ಬಿಒಐ)**

**ಕಾರ್ಯಸೂಚಿ 15.11 ದೇಶೀಯ ಹಣ ವರ್ಗಾವಣೆ – ನಿಯಮಾವಳಿ ಪರಿಶೀಲನೆ**

ಬ್ಯಾಂಕಿಂಗ್, ಪಾವತಿ ವ್ಯವಸ್ಥೆಗಳು ಮತ್ತು ಕೆವೈಸಿ ಕಾರ್ಯವಿಧಾನಗಳಲ್ಲಿನ ಪ್ರಗತಿಯನ್ನು ಪ್ರತಿಬಿಂಬಿಸಲು 2011ರಲ್ಲಿ ಪರಿಚಯಿಸಲಾದ 'ಆರ್ಬಿಐ' ಸುತ್ತೋಲೆ ಡಿಪಿಎಸ್‌ಎಸ್ ಪಿಡಿ.ಸಿಒ. ಸಂಖ್ಯೆ.622/02.27.019/2011-2012 ದಿನಾಂಕ ಅಕ್ಟೋಬರ್ 5, 2011 ಬಗ್ಗೆ ಪ್ರಾದೇಶಿಕ ನಿರ್ದೇಶಕರು ಉಲ್ಲೇಖಿಸಿದರು. ಸುತ್ತೋಲೆಯನ್ನು ಪರಿಶೀಲಿಸಲಾಯಿತು ಮತ್ತು 'ನಗದು ಪೇ-ಔಟ್' ಹಾಗೂ 'ನಗದು ಪೇ-ಇನ್' ಸೇವೆಯನ್ನು ಗಣನೆಗೆ ತೆಗೆದುಕೊಂಡು 'ದೇಶೀಯ ಹಣ ವರ್ಗಾವಣೆ - ನಿಯಮಾವಳಿ ಪರಿಶೀಲನೆ' ಕುರಿತ ಜುಲೈ 24, 2024ರ 'ಆರ್ಬಿಐ' ಸುತ್ತೋಲೆಯ ಮೂಲಕ ಕೆಲವೊಂದು ಬದಲಾವಣೆಗಳನ್ನು ಮಾಡಲಾಗಿದೆ. ವಿಶೇಷವಾಗಿ ವ್ಯವಹಾರ ಪ್ರತಿನಿಧಿಯ ವಹಿವಾಟುಗಳಿಗೆ ಸಂಬಂಧಿಸಿದಂತೆ ಇದನ್ನು ಗಮನಿಸುವಂತೆ ಬ್ಯಾಂಕುಗಳಿಗೆ ಸಲಹೆ ನೀಡಲಾಯಿತು.

**ಕಾರ್ಯಸೂಚಿ 15.12: ಬ್ಯಾಂಕೇತರ ಹಣಕಾಸು ಕಂಪನಿಗಳು (ಎನ್‌ಬಿಎಫ್‌ಸಿ) ಎಲ್ಲಾ ಸಾಲದ ಮೇಲೆ ಹೆಚ್ಚಿನ ಬಡ್ಡಿದರ ವಿಧಿಸುತ್ತಿವೆ.**

ಬ್ಯಾಂಕೇತರ ಹಣಕಾಸು ಸಂಸ್ಥೆಗಳು(ಎನ್‌ಬಿಎಫ್‌ಸಿ), 'ಎಸ್‌ಎಲ್‌ಬಿಸಿ'ಯ ಸದಸ್ಯರಲ್ಲ ಮತ್ತು ಆದ್ದರಿಂದ 'ಎನ್‌ಬಿಎಫ್‌ಸಿ'ಗಳು ವಿಧಿಸುವ ಹೆಚ್ಚಿನ ಬಡ್ಡಿದರಗಳಿಗೆ ಸಂಬಂಧಿಸಿದ ವಿಷಯವನ್ನು ಈ ಸಭೆಯಲ್ಲಿ ಹೈಲೈಟ್(ಪ್ರಸ್ತಾಪಿಸುವುದು) ಮಾಡುವುದು ಬೇಡ ಎಂದು ಪ್ರಾದೇಶಿಕ ನಿರ್ದೇಶಕರು ಹೇಳಿದರು. 'ಆರ್‌ಬಿಐ' ನಡೆಸಿದ ಸಮೀಕ್ಷೆಯಲ್ಲಿ ಕೃಷಿ ಸಂಬಂಧಿತ ಸಾಲಗಳಲ್ಲಿ 59% ಬ್ಯಾಂಕಿಂಗ್ ವಲಯದಿಂದ ಮಂಜೂರು ಮಾಡಲಾಗಿದೆ ಎಂದು ಗಮನಿಸಲಾಗಿದೆ. 'ಎನ್‌ಬಿಎಫ್‌ಸಿ'ಯ ಬಡ್ಡಿದರವನ್ನು 'ಆರ್‌ಬಿಐ' ನಿಯಂತ್ರಣ ಮುಕ್ತಗೊಳಿಸಿದ್ದು, 'ಎನ್‌ಬಿಎಫ್‌ಸಿ' ವಿಧಿಸುವ ಬಡ್ಡಿದರವು ನಿಧಿಯ ವೆಚ್ಚ, ಲಾಭಾಂಶ ಮತ್ತು ರಿಸ್ಕ್ ಪ್ರೀಮಿಯಂ ಇತ್ಯಾದಿಗಳನ್ನು ಆಧರಿಸಿದೆ ಎಂದು ತಿಳಿಸಿದರು.

ಬ್ಯಾಂಕುಗಳು ಸಾಮಾನ್ಯವಾಗಿ ಅನಿಶ್ಚಯಗಳನ್ನು ಇಷ್ಟಪಡುವುದಿಲ್ಲ, ಹೀಗಾಗಿ ಬ್ಯಾಂಕುಗಳು ಸಾಲ ಸೌಲಭ್ಯಗಳನ್ನು ನಿರಾಕರಿಸುವುದರಿಂದ ಗ್ರಾಹಕರು 'ಎಂಎಫ್‌ಐ'ಗಳು, 'ಎನ್‌ಬಿಎಫ್‌ಸಿ'ಗಳಿಂದ ಹೆಚ್ಚಿನ ಬಡ್ಡಿದರದಲ್ಲಿ ಸಾಲ ಪಡೆಯುತ್ತಾರೆ. ಯಾವುದೇ ಒಂದು 'ಎನ್‌ಬಿಎಫ್‌ಸಿ'ಗೆ ಸಂಬಂಧಿಸಿದಂತೆ ಏನಾದರು ಸಮಸ್ಯೆಗಳನ್ನು 'ಎಸ್‌ಎಲ್‌ಬಿಸಿ' ಹೊಂದಿದ್ದರೆ, ಅದನ್ನು ಸೂಕ್ತ ಮಟ್ಟದಲ್ಲಿ ಪರಿಶೀಲಿಸಲು 'ಆರ್‌ಬಿಐ' ಗಮನಕ್ಕೆ ತರಬಹುದು ಎಂದು ಆರ್.ಡಿ. ಅಭಿಪ್ರಾಯಪಟ್ಟರು.

**ಕಾರ್ಯಸೂಚಿ ವಿಷಯ ಸಂಖ್ಯೆ - 16**

**ಕಾರ್ಯಸೂಚಿ 16.1: ಕಾಫಿ ಬೆಳೆಗಾರರ ಖಾತೆಗಳಿಗೆ ಬಡ್ಡಿ ಸಹಾಯಧನವನ್ನು ಜಮಾ ಮಾಡುವಲ್ಲಿ ವಿಳಂಬ:**

ಕಾಫಿ ಮಂಡಳಿಯಿಂದ 'ನಬಾರ್ಡ್'ಗೆ ಪತ್ರ ಬಂದಿದೆ ಎಂದು 'ನಬಾರ್ಡ್'ನ ಜನರಲ್ ಮ್ಯಾನೇಜರ್ ನಮಗೆ ಮಾಹಿತಿ ನೀಡಿದ್ದಾರೆ. ಭಾರತ ಸರ್ಕಾರವು ಸಕಾಲದಲ್ಲಿ ಹಣವನ್ನು ಬಿಡುಗಡೆ ಮಾಡಿದ್ದರೂ ಮತ್ತು ನಂತರ ನಬಾರ್ಡ್ ಅದನ್ನು ವಿತರಿಸಿದರೂ,

ಸಬ್ಸಿಡಿ ಮೊತ್ತವನ್ನು ಬೆಳೆಗಾರರ ಖಾತೆಗಳಿಗೆ ಜಮಾ ಮಾಡುವಲ್ಲಿ ಬ್ಯಾಂಕುಗಳು ಗಮನಾರ್ಹ ವಿಳಂಬ ಮಾಡಿವೆ ಎಂದು ವರದಿಯಾಗಿದೆ.

ಯಾವುದೇ ಅನಗತ್ಯ ವಿಳಂಬವಿಲ್ಲದೆ ಸಬ್ಸಿಡಿ ಮೊತ್ತವನ್ನು ಬೆಳೆಗಾರರ ಖಾತೆಗಳಿಗೆ ಜಮಾ ಮಾಡುವುದನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಸದಸ್ಯ ಬ್ಯಾಂಕುಗಳನ್ನು ಕೋರಲಾಗಿದೆ.

ಕಾಫಿ ಬೆಳೆಗಾರರಿಗೆ ಬಡ್ಡಿ ಸಹಾಯಧನ ನೀಡಲು ಎಲ್ಲಾ ಬ್ಯಾಂಕುಗಳು ವಿಶೇಷ ಶಿಬಿರಗಳನ್ನು ನಡೆಸಬೇಕು ಎಂದು ಮುಖ್ಯ ಕಾರ್ಯದರ್ಶಿ ಮಾಹಿತಿ ನೀಡಿದರು.

**(ಕ್ರಮ: ಎಲ್ಲಾ ಬ್ಯಾಂಕುಗಳು)**

**ಕಾರ್ಯಸೂಚಿ 16.2: ಹಣಕಾಸು ವರ್ಷ 2024-25ರಲ್ಲಿ 'ಎಸಿಎಬಿಸಿ' ಯೋಜನೆಯ ಮುಂದುವರಿಕೆ:**

'ನಬಾರ್ಡ್'ನ ಪ್ರಧಾನ ವ್ಯವಸ್ಥಾಪಕರು ಪ್ರಸಕ್ತ ಹಣಕಾಸು ವರ್ಷ (ಎಫ್ ವೈ) 2024-25ರ 'ಎಸಿಎಬಿಸಿ' ಯೋಜನೆಯನ್ನು ಅಸ್ತಿತ್ವದಲ್ಲಿರುವ ವೆಚ್ಚದ ಮಾನದಂಡಗಳೊಂದಿಗೆ ಮುಂದುವರಿಸುವ ಬಗ್ಗೆ ಮಾಹಿತಿ ನೀಡಿದರು. ಈ ಯೋಜನೆಯಡಿ ತರಬೇತಿ ಪಡೆದ ಅರ್ಹ ಅರ್ಜಿದಾರರಿಗೆ ಸಾಲವನ್ನು ವಿಸ್ತರಿಸಲು ಎಲ್ಲಾ ಬ್ಯಾಂಕುಗಳನ್ನು ಕೋರಲಾಗಿದೆ.

**(ಕ್ರಮ: ಎಲ್ಲಾ ಬ್ಯಾಂಕುಗಳು)**

**ಕಾರ್ಯಸೂಚಿ 16.3: ಸರ್ಕಾರಿ ಸಬ್ಸಿಡಿ ಯೋಜನೆಗಳ (ಜಿಎಸ್ಎಸ್) ಅಡಿಯಲ್ಲಿ 'ಸದ್ವಿನಿಯೋಗ ಪ್ರಮಾಣಪತ್ರ'ದ ಸಲ್ಲಿಕೆ:**

ಅಂತಿಮ ಸಬ್ಸಿಡಿ ಮೊತ್ತವನ್ನು ಪಡೆದ ಕೂಡಲೇ 'ಸದ್ವೀನಿಯೋಗ ಪ್ರಮಾಣಪತ್ರ'ಗಳನ್ನು(ಯುಸಿ) ನಬಾರ್ಡ್ಗೆ ಸಲ್ಲಿಸುವಂತೆ ಎಲ್ಲಾ ಬ್ಯಾಂಕುಗಳಿಗೆ ಸೂಚಿಸಲಾಗಿದೆ. ಕೃಷಿ ಯಾಂತ್ರೀಕರಣ ಮಧ್ಯಸ್ಥಿಕೆ ಯೋಜನೆ (ಎಎಂಐಎಸ್) ಮತ್ತು

'ಎಸಿಎಬಿಸಿ' ಯೋಜನೆಗಳ ಸಂದರ್ಭದಲ್ಲಿ, ಇದನ್ನು ತಪ್ಪದೇ ಅನುಸರಿಸಬೇಕು ಎಂದು ಸೂಚಿಸಲಾಗಿದೆ.

**(ಕ್ರಮ: ಎಲ್ಲಾ ಬ್ಯಾಂಕುಗಳು)**

**ಕಾರ್ಯಸೂಚಿ 16.4: ಹಣಕಾಸು ಪ್ರಮಾಣದ ಡಿಜಿಟಲೀಕರಣ:**

'ನಬಾರ್ಡ್' ಜನರಲ್ ಮ್ಯಾನೇಜರ್ ಮಾತನಾಡಿ, ಭಾರತ ಸರ್ಕಾರವು ರಾಜ್ಯ ಸರ್ಕಾರಗಳೊಂದಿಗೆ ಸೇರಿ ರೈತರಿಗೆ ಸಾಲ ಪಡೆಯುವುದನ್ನು ಸುಲಭಗೊಳಿಸಲು 'ಅಗ್ರಿ-ಸ್ಟ್ಯಾಕ್' ಅನ್ನು ಸ್ಥಾಪಿಸುತ್ತಿದೆ ಎಂದು ಮಾಹಿತಿ ನೀಡಿದರು. ಕೃಷಿ ಸಾಲದ ಪ್ರಮಾಣವನ್ನು ನಿರ್ಧರಿಸುವಲ್ಲಿ ಹಣಕಾಸು ಪ್ರಮಾಣ (ಎಸ್ಒಎಫ್) ಒಂದು ಪ್ರಮುಖ ಮಾನದಂಡ ಆಗಿರುವುದರಿಂದ, ಭಾರತ ಸರ್ಕಾರದ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯದ (ಎಂಒಎ ಮತ್ತು ಎಫ್ಡಬ್ಲ್ಯೂ) 'ಬೆಳೆ ನೋಂದಣಿ'ಗೆ(ಕ್ರಾಪ್ ರಿಜಿಸ್ಟ್ರಿ) ಅನುಗುಣವಾಗಿ 'ಎಸ್ಒಎಫ್' ಡೇಟಾವನ್ನು ಸಂಗ್ರಹಿಸಲು 'ಡಿಜಿಟಲ್ ಎಸ್ಒಎಫ್ ರಿಜಿಸ್ಟ್ರಿ'ಯನ್ನು ನಬಾರ್ಡ್ ರೂಪಿಸಿದೆ. 2025-26ನೇ ಸಾಲಿಗೆ 'ಎಸ್ಒಎಫ್' ನಿಗದಿಪಡಿಸುವ ಪ್ರಕ್ರಿಯೆಯನ್ನು ಅಕ್ಟೋಬರ್ 2024ರ ಒಳಗಾಗಿ 'ಅಪೆಕ್ಸ್ ಬ್ಯಾಂಕ್' ಪ್ರಾರಂಭಿಸಲಿದೆ.

**(ಕ್ರಮ: ಅಪೆಕ್ಸ್ ಬ್ಯಾಂಕ್)**

**ಕಾರ್ಯಸೂಚಿ 16.5: ವ್ಯವಹರಿಸಬಹುದಾದ ವಿದ್ಯುನ್ಮಾನ ಉಗ್ರಾಣ ರಸೀದಿ(ಎಲೆಕ್ಟ್ರಾನಿಕ್ ನೆಗೊಷಬಲ್ ವೇರ್‌ಹೌಸ್ ರಿಸೀಟ್- ಇ-ಎನ್‌ಡಬ್ಲ್ಯು ಆರ್) ಮೂಲಕ ಕೃಷಿ ಸರಕುಗಳಿಗೆ ಅಡಮಾನ ಹಣಕಾಸು:**

'ಇ-ಎನ್‌ಡಬ್ಲ್ಯು ಆರ್', ಬ್ಯಾಂಕುಗಳು ಮತ್ತು ಇತರ ಹಣಕಾಸು ಸಂಸ್ಥೆಗಳಿಂದ ಸುಲಭವಾಗಿ ಅಡಮಾನ ಹಣಕಾಸು ಒದಗಿಸಲು ಅನುವುಮಾಡುತ್ತದೆ ಎಂದು

‘ನಬಾರ್ಡ್’ನ ಜನರಲ್ ಮ್ಯಾನೇಜರ್ ಮಾಹಿತಿ ನೀಡಿದರು. ಸರಕು-ಸಾಗಣೆ ಸಂಬಂಧಿತ ವೆಚ್ಚವನ್ನು ಉಳಿಸಲು ‘ಇ-ಎನ್‌ಬ್ಲ್ಯೂಆರ್’ ಸಹಾಯ ಮಾಡುತ್ತದೆ. ಏಕೆಂದರೆ ಯಾವುದೇ ಭೌತಿಕ ಸಾಗಣೆ ಇಲ್ಲದೆ ಗೋದಾಮಿನಲ್ಲಿರುವ ‘ಸಂಗ್ರಹ’ವನ್ನು ಅನೇಕ ಖರೀದಿದಾರರಿಗೆ ನೀಡಬಹುದು. ಜೊತೆಗೆ ಭಾಗಶಃ ವರ್ಗಾವಣೆ ಅಥವಾ ಹಣ ಹಿಂಪಡೆಯುವಿಕೆಗಾಗಿ ವಿಭಜಿಸಬಹುದು. ಕೃಷಿ ಸರಕುಗಳು ಮತ್ತು ಸಾಮಗ್ರಿಗಳ ಸಂಗ್ರಹಣೆಗಾಗಿ ವೈಜ್ಞಾನಿಕ ಗೋದಾಮುಗಳನ್ನು ‘ಇ-ಎನ್‌ಡಬ್ಲ್ಯುಆರ್’ ಉತ್ತೇಜಿಸುತ್ತದೆ, ಹೀಗಾಗಿ ಬ್ಯಾಂಕರ್‌ಗಳು ಅವುಗಳನ್ನು ಉತ್ತೇಜಿಸಬೇಕು ಎಂದು ಮನವಿ ಮಾಡಿದರು.

**(ಕ್ರಮ: ಅಪೆಕ್ಸ್ ಬ್ಯಾಂಕ್)**

**ಕಾರ್ಯಸೂಚಿ 16.6: ವ್ಯವಹರಿಸಬಹುದಾದ ವಿದ್ಯುನ್ಮಾನ ಉಗ್ರಾಣ ರಸೀದಿ (ಇ-ಎನ್ ಡಬ್ಲ್ಯುಆರ್) ಮೂಲಕ ಕೃಷಿ ಸರಕುಗಳಿಗೆ ಅಡಮಾನ ಸಾಲ:**

‘ನಬಾರ್ಡ್’ ಜನರಲ್ ಮ್ಯಾನೇಜರ್ ಮಾತನಾಡಿ, ‘ನಬ್‌ಸಂರಕ್ಷಣ್’ ಸಾಲ ಖಾತರಿ ಯೋಜನೆ ಅಡಿ, ಬ್ಯಾಂಕುಗಳು ‘ಎಫ್‌ಪಿಒ’ಗಳಿಗೆ ಅಡಮಾನರಹಿತ ಸಾಲವನ್ನು ನೀಡಬಹುದು. ‘ಎಫ್‌ಪಿಒ’ಗಳು ಇತರ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದಿದ್ದರೂ, ‘ಎಫ್‌ಪಿಒ’ಗಳಿಗೆ ಓವರ್‌ಡ್ರಾಫ್ಟ್ ಸೌಲಭ್ಯಗಳನ್ನು ಒದಗಿಸುವ ಸಾಧ್ಯತೆಯನ್ನು ಬ್ಯಾಂಕುಗಳು ಅನ್ವೇಷಿಸಬಹುದು ಎಂದು ಮಾಹಿತಿ ನೀಡಿದರು.

**(ಕ್ರಮ: ಎಲ್ಲಾ ಬ್ಯಾಂಕುಗಳು)**

**ಕಾರ್ಯಸೂಚಿ 16.7: ಗ್ರಾಮೀಣ ಸಂಪರ್ಕಕ್ಕಾಗಿ ಹಣಕಾಸು ಸೇರ್ಪಡೆ ನಿಧಿ (ಎಫ್‌ಐಎಫ್) ಅಡಿಯಲ್ಲಿ ಬೆಂಬಲ-ಎಚ್‌ಟಿಎಸ್-ವಿಎಸ್‌ಎಟಿ, ‘ಡ್ಯುಯಲ್ ಎಲ್ಟಿಇ’ ಮತ್ತು ‘ಎಸ್ಡಿವ್ಯಾನ್’ ತಂತ್ರಜ್ಞಾನಗಳು:**

ಸೀಮಿತ ಸಂಪರ್ಕವಿರುವ ಪ್ರದೇಶಗಳಲ್ಲಿ(ನೆಟ್‌ವರ್ಕ್ ಗ್ರೇ ಏರಿಯಾ), ಸೌರಶಕ್ತಿ ಚಾಲಿತ ಮತ್ತು ಸೌರಶಕ್ತಿ ಚಾಲಿತವಲ್ಲದ 'ವಿಎಸ್‌ಎಟಿ'ಗಳಿಗೆ 'ಕ್ಯಾಪೆಕ್ಸ್' ಬೆಂಬಲದ ರೂಪದಲ್ಲಿ ಸಂಪರ್ಕ ಸುಧಾರಿಸಲು ನಬಾರ್ಡ್ ಬೆಂಬಲ ಒದಗಿಸುತ್ತಿದೆ. 'ಎಫ್‌ಐಎಫ್' ಅಡಿಯಲ್ಲಿ ಈ ಬೆಂಬಲ ನೀಡಲಾಗುತ್ತಿದೆ ಎಂದು 'ನಬಾರ್ಡ್'ನ ಜನರಲ್ ಮ್ಯಾನೇಜರ್ ಮಾಹಿತಿ ನೀಡಿದರು. ಹೀಗೆ ಬೆಂಬಲಿಸಲಾಗುತ್ತಿರುವ 'ವಿಎಸ್‌ಎಟಿ'ಗಳು ವ್ಯಾಪಕ ಬೀಮ್ ಆಧಾರಿತ ಸಂವಹನ ವ್ಯವಸ್ಥೆಯನ್ನು ಆಧರಿಸಿದೆ. ಅದರ ಮಿತಿಗಳನ್ನು ಗಮನದಲ್ಲಿಟ್ಟುಕೊಂಡು, ಸುಧಾರಣೆಯಾಗಿ 'ಎಚ್‌ಟಿಎಸ್' ಆಧಾರಿತ 'ವಿಎಸ್‌ಎಟಿ' ಸಂವಹನ ವ್ಯವಸ್ಥೆಯನ್ನು ಪರಿಚಯಿಸಲು ನಿರ್ಧರಿಸಲಾಗಿದೆ.

ಇದಲ್ಲದೆ, ಈಶಾನ್ಯ ಪ್ರದೇಶ, ಗುಡ್ಡಗಾಡು ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು (ಹಿಮಾಚಲ ಪ್ರದೇಶ, ಉತ್ತರಾಖಂಡ, ಲಡಾಖ್ ಮತ್ತು ಜಮ್ಮು ಮತ್ತು ಕಾಶ್ಮೀರದ ಕೇಂದ್ರಾಡಳಿತ ಪ್ರದೇಶಗಳು) ಹಾಗೂ ಸಂಪರ್ಕ ಅನಿಶ್ಚಿತವಾಗಿರುವ ಮತ್ತು ಈ ಹಿಂದೆ 'ಎಫ್‌ಐಎಫ್' ಅಡಿಯಲ್ಲಿ 'ವಿಎಸ್‌ಎಟಿ'ಗೆ ಯಾವುದೇ ಬೆಂಬಲ ಪಡೆಯದ ಭಾಗಗಳಲ್ಲಿ 'ಎಸ್ಡಿ ವಾನ್' ಅಥವಾ 'ಡ್ಯುಯಲ್ ಎಲ್ಟಿಇ' ಸಂಯೋಜನೆಯೊಂದಿಗೆ 'ಎಚ್ಟಿಎಸ್ ವಿಎಸ್‌ಎಟಿ' ಸ್ಥಾಪನೆಗೆ ಬೆಂಬಲ ಪಡೆಯಲು ಎಲ್ಲಾ ಬ್ಯಾಂಕುಗಳು ಅರ್ಹವಾಗಿವೆ ಎಂದು ಅವರು ಮಾಹಿತಿ ನೀಡಿದರು.

ಕಾರ್ಯಾಚರಣೆ ಅವಧಿ: ಈ ಯೋಜನೆಯು ಏಪ್ರಿಲ್ 1, 2024ರಿಂದ ಮಾರ್ಚ್ 31, 2027ರ ವರೆಗೆ 3 ವರ್ಷಗಳ ಅವಧಿಗೆ ಕಾರ್ಯ ನಿರ್ವಹಿಸುತ್ತದೆ. ಈ ಯೋಜನೆಗೆ ಸಂಬಂಧಿಸಿದಂತೆ ಜುಲೈ 10, 2024ರಂದು ಎಲ್ಲಾ ಡಿಸಿಸಿಬಿಗಳು, 'ಆರ್‌ಆರ್‌ಬಿ'ಗಳು, ಪ್ರಮುಖ ವಾಣಿಜ್ಯ ಬ್ಯಾಂಕುಗಳು (ಅಂದರೆ ಎಸ್ಬಿಐ, ಕೆನರಾ ಬ್ಯಾಂಕ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕ್ ಆಫ್ ಬರೋಡಾ) ಮತ್ತು ಪಾವತಿ ಬ್ಯಾಂಕುಗಳಿಗೆ(ಏರ್ಟೆಲ್, ಫಿನೋ ಪೇಮೆಂಟ್ ಬ್ಯಾಂಕ್, ಐಪಿಪಿಬಿ) ಇ-ಮೇಲ್ ಮೂಲಕ ಸುತ್ತೋಲೆಯನ್ನು 'ನಬಾರ್ಡ್' ಹಂಚಿಕೊಂಡಿದೆ.

ಈ ಯೋಜನೆಯಡಿ ಬೆಂಬಲ ಪಡೆಯಲು ಮತ್ತು ನಬಾರ್ಡ್‌ಗೆ ಪ್ರಸ್ತಾವನೆಗಳನ್ನು ಸಲ್ಲಿಸಲು ಬ್ಯಾಂಕುಗಳನ್ನು ಕೋರಲಾಗಿದೆ.

**(ಕ್ರಮ: ಎಲ್ಲಾ ಬ್ಯಾಂಕುಗಳು)**

**ಕಾರ್ಯಸೂಚಿ 16.8: ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಧಿ (ಆರ್ಐಡಿಎಫ್) ಅಡಿಯಲ್ಲಿ ಕರ್ನಾಟಕ ಸರ್ಕಾರಕ್ಕೆ ಬೆಂಬಲ**

'ನಬಾರ್ಡ್'ನ ಪ್ರಧಾನ ವ್ಯವಸ್ಥಾಪಕರು ಮಾತನಾಡಿ, ಗ್ರಾಮೀಣ ಪ್ರದೇಶಗಳ ಸರ್ವಾಂಗೀಣ ಅಭಿವೃದ್ಧಿಗೆ ಅನುವು ಮಾಡಿಕೊಡುವ ಮೂಲಕ ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳು, ಗ್ರಾಮೀಣ ಸಂಪರ್ಕ ಹಾಗೂ ಸಾಮಾಜಿಕ ವಲಯವನ್ನು ಒಳಗೊಂಡ ಗ್ರಾಮೀಣ ಮೂಲಸೌಕರ್ಯಗಳ ಅಭಿವೃದ್ಧಿಗೆ ಕರ್ನಾಟಕ ಸರ್ಕಾರಕ್ಕೆ(ಜಿಒಕೆ) 'ನಬಾರ್ಡ್' ಬೆಂಬಲ ನೀಡುತ್ತಿದೆ ಎಂದು ಮಾಹಿತಿ ನೀಡಿದರು. ಒಟ್ಟು 28,728.69 ಕೋಟಿ ರೂ.ಗಳ ವೆಚ್ಚದದಲ್ಲಿ ಒಟ್ಟು 44,134 ಯೋಜನೆಗಳಿಗೆ ರಾಜ್ಯ ಸರ್ಕಾರಕ್ಕೆ ಬೆಂಬಲ ನೀಡಿದೆ ಎಂದು ಮಾಹಿತಿ ನೀಡಿದರು

ಕರ್ನಾಟಕ ಸರ್ಕಾರವು ಪೂರ್ಣಗೊಳಿಸಿದ ನೀರಾವರಿ ಯೋಜನೆಗಳ ಕಮಾಂಡ್ ಪ್ರದೇಶಗಳಲ್ಲಿನ ರೈತರಿಗೆ 'ನಬಾರ್ಡ್'ನ ಉಪಕ್ರಮವಾದ 'ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಧಿ'(ಆರ್ಐಡಿಎಫ್) ಅಡಿಯಲ್ಲಿಬ್ಯಾಂಕುಗಳು ರಿಯಾಯಿತಿ ದರದಲ್ಲಿ ಕೃಷಿ ಸಾಲವನ್ನು ಒದಗಿಸಬಹುದು ಎಂದು ಹೇಳಿದರು.

**(ಕ್ರಮ: ಎಲ್ಲಾ ಬ್ಯಾಂಕುಗಳು)**

**ಕಾರ್ಯಸೂಚಿ ವಿಷಯ ಸಂಖ್ಯೆ - 17**

**ಸಾಮಾಜಿಕ ಭದ್ರತಾ ಯೋಜನೆಗಳ ಪ್ರಗತಿ:**

'ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ'(ಪಿಎಂಜೆಜೆಬಿವೈ), 'ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ'(ಪಿಎಂಎಸ್ಬಿವೈ) ಮತ್ತು 'ಅಟಲ್ ಪಿಂಚಣಿ

ಯೋಜನೆ'(ಎಪಿವೈ) ಯೋಜನೆಗಳ ಅಡಿಯಲ್ಲಿ ಕ್ರಮವಾಗಿ 172 ಲಕ್ಷ, 69 ಲಕ್ಷ ಮತ್ತು 37 ಲಕ್ಷ ಖಾತೆಗಳು ಬಾಕಿ ಇವೆ ಎಂದು ಸಂಚಾಲಕರು ಸಭೆಗೆ ಮಾಹಿತಿ ನೀಡಿದರು.

ಇದಲ್ಲದೆ, 'ಸುರಕ್ಷಾ' ಯೋಜನೆಗಳ ಪ್ರಗತಿಯನ್ನು ಪರಿಶೀಲಿಸಲು ಕರ್ನಾಟಕದ ಸರ್ಕಾರದ ಹಣಕಾಸು ಇಲಾಖೆಯ ಕಾರ್ಯದರ್ಶಿಗಳು ಮಾಸಿಕ ಪರಿಶೀಲನಾ ಸಭೆ ನಡೆಸುತ್ತಿದ್ದಾರೆ ಎಂದು ಅವರು ಮಾಹಿತಿ ನೀಡಿದರು. ಜೊತೆಗೆ, 'ಸುರಕ್ಷಾ' ಯೋಜನೆಗಳ ಅಡಿಯಲ್ಲಿ ಎಲ್ಲಾ ಅರ್ಹ ಖಾತೆಗಳಿಗೆ ಅಗತ್ಯ ಸೌಕರ್ಯ ಒದಗಿಸುವಂತೆ ಬ್ಯಾಂಕುಗಳಿಗೆ ಸಲಹೆ ನೀಡಿದರು.

'ಸುರಕ್ಷಾ' ಯೋಜನೆಗಳ ಅಡಿಯಲ್ಲಿ ಎಲ್ಲಾ ಅರ್ಹ ಫಲಾನುಭವಿಗಳನ್ನು ಸೇರಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರದ ಸೂಚನೆಯಂತೆ 18.06.2024 ರಿಂದ 30.09.2024 ರವರೆಗೆ ಗ್ರಾಮ ಪಂಚಾಯತಿ ಮಟ್ಟದಲ್ಲಿ ಸಾಮಾಜಿಕ ಭದ್ರತಾ ಯೋಜನೆಗಳ ಅಡಿಯಲ್ಲಿ ಪರಿಪೂರ್ಣತೆ ಅಭಿಯಾನವನ್ನು ನಡೆಸಲಾಗುತ್ತಿದೆ ಎಂದು ಸಂಚಾಲಕರು ಮಾಹಿತಿ ನೀಡಿದರು. ಅಭಿಯಾನವನ್ನು ಯಶಸ್ವಿಗೊಳಿಸುವಂತೆ ಅವರು ಎಲ್ಲಾ ಸದಸ್ಯ ಬ್ಯಾಂಕುಗಳಿಗೆ ಸಲಹೆ ನೀಡಿದರು.

ಕರ್ನಾಟಕದ ಸರ್ಕಾರದ ಹಣಕಾಸು ಇಲಾಖೆಯ ಕಾರ್ಯದರ್ಶಿ (ಹಣಕಾಸು ಸುಧಾರಣೆ) ಡಾ. ಆರ್. ವಿಶಾಲ್ ಅವರು ಇಳಿಮುಖವಾಗಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದರು. ಯೋಜನಾ ಖಾತೆಗಳ ಸಾಮಾಜಿಕ ಭದ್ರತೆ ಮುಚ್ಚುವಿಕೆ ಪ್ರಮಾಣ ಹೆಚ್ಚಿರುವುದು ಇದಕ್ಕೆ ಕಾರಣ ಎಂದು ಸ್ಪಷ್ಟಪಡಿಸಲಾಯಿತು. ಸಾಮಾಜಿಕ ಭದ್ರತಾ ಯೋಜನೆಗಳ ಅಡಿಯಲ್ಲಿ ಎಲ್ಲಾ ಅರ್ಹ ಫಲಾನುಭವಿಗಳನ್ನು ಪರಿಪೂರ್ಣವಾಗಿ ತಲುಪುವಂತೆ ಮತ್ತು ಈ ನಿಟ್ಟಿನಲ್ಲಿ ಹೆಚ್ಚಿನ ಗಮನ ಹರಿಸುವಂತೆ ಅವರು ಎಲ್ಲಾ ಬ್ಯಾಂಕ್‌ಗಳಿಗೆ ಅವರು ಸಲಹೆ ನೀಡಿದರು.

**(ಕ್ರಮ: ಎಲ್ಲಾ 'ಎಲ್ಡಿಎಂಎಸ್' ಮತ್ತು ಬ್ಯಾಂಕುಗಳು)**

**ಕಾರ್ಯಸೂಚಿ ವಿಷಯ ಸಂಖ್ಯೆ - 18**

**ಬ್ಯಾಂಕ್ ಸಂಬಂಧಿತ ಸರ್ಕಾರಿ ಪ್ರಾಯೋಜಿತ ಯೋಜನೆಗಳ ಸ್ಥಿತಿಗತಿ:**

ಕರ್ನಾಟಕದ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರಿಂದ 'ಎಸ್‌ಎಲ್‌ಬಿಸಿ' ಸಂವಹನವನ್ನು ಸ್ವೀಕರಿಸಲಾಗಿದ್ದು, ಸರ್ಕಾರಿ ಪ್ರಾಯೋಜಿತ ಯೋಜನೆಗಳ ತಿರಸ್ಕಾರ ಕಾರಣಗಳನ್ನು ಪರಿಶೀಲಿಸಲು ಸೂಚನೆ ನೀಡಲಾಗಿದೆ ಎಂದು ಉಪ ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು.

ಬಾಕಿ ಇರುವ ಎಲ್ಲಾ ಅರ್ಜಿಗಳನ್ನು ಇತ್ಯರ್ಥಗೊಳಿಸುವಂತೆ ಹಾಗೂ ಅರ್ಜಿಗಳ ತಿರಸ್ಕಾರಕ್ಕೆ ಸಾಮಾನ್ಯ ಕಾರಣಗಳನ್ನು ನೀಡುವ ಮೂಲಕ ಕ್ಷೇತ್ರ ಮಟ್ಟದಲ್ಲಿ ಅವುಗಳನ್ನು ಮರುಪರಿಶೀಲಿಸಲು ರಾಜ್ಯ ಸರ್ಕಾರಕ್ಕೆ ಅನುವು ಮಾಡಿಕೊಡುವಂತೆ ಎಲ್ಲಾ ಸದಸ್ಯ ಬ್ಯಾಂಕುಗಳಿಗೆ ಕರ್ನಾಟಕದ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಸಲಹೆ ನೀಡಿದರು.

**(ಕ್ರಮ: ಎಲ್ಲಾ ಎಲ್ಡಿಎಂಎಸ್ ಮತ್ತು ಬ್ಯಾಂಕುಗಳು)**

**ಕಾರ್ಯಸೂಚಿ ವಿಷಯ ಸಂಖ್ಯೆ - 19**

**'ಪಿಎಂ ಸ್ವನಿಧಿ' ಯೋಜನೆ:**

'ಪಿಎಂ ಸ್ವನಿಧಿ' ಸಾಲ ಮಂಜೂರಾತಿಯಲ್ಲಿ ಕರ್ನಾಟಕ ರಾಜ್ಯವು 5ನೇ ಸ್ಥಾನದಲ್ಲಿದ್ದು, ನಂ.1 ಸ್ಥಾನವನ್ನು ಮರಳಿ ಪಡೆಯಲು ಶ್ರಮಿಸಬೇಕು ಎಂದು ಉಪ ಸಂಚಾಲಕರು ತಿಳಿಸಿದರು. 'ಪಿಎಂ ಸ್ವನಿಧಿ' ಯೋಜನೆಯಡಿ 'ರಾಷ್ಟ್ರಮಟ್ಟದ ಪ್ರಶಂಸಾ ಪ್ರಶಸ್ತಿ'ಯಲ್ಲಿ 'ಬಿಬಿಎಂಪಿ'ಗೆ 2ನೇ ಶ್ರೇಯಾಂಕ, 'ಸ್ವನಿಧಿ ಸೇ ಸಮೃದ್ಧಿ' ಅಡಿಯಲ್ಲಿ ತುಮಕೂರು ಮಹಾನಗರ ಪಾಲಿಕೆಗೆ 3ನೇ ಶ್ರೇಯಾಂಕ ಲಭಿಸಿದೆ ಎಂದು ಅವರು ಮಾಹಿತಿ ನೀಡಿದರು.

‘ಪಿಎಂ ಸ್ವನಿಧಿ’ ಯೋಜನೆಯಡಿ ಕರ್ನಾಟಕ ರಾಜ್ಯವು 5,26,527 ಅರ್ಜಿಗಳನ್ನು ಮಂಜೂರು ಮಾಡಿದೆ ಮತ್ತು 5,00,564 ಅರ್ಜಿಗಳಿಗೆ ಹಣ ವಿತರಿಸಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಬಾಕಿ ಇರುವ ಅರ್ಜಿಗಳನ್ನು ಒಂದು ತಿಂಗಳೊಳಗೆ ಇತ್ಯರ್ಥಗೊಳಿಸುವಂತೆ ಎಲ್ಲಾ ಸದಸ್ಯ ಬ್ಯಾಂಕುಗಳಿಗೆ ಕರ್ನಾಟಕದ ಸರ್ಕಾರದ ಮುಖ್ಯಕಾರ್ಯದರ್ಶಿಗಳೂ ಸೂಚನೆ ನೀಡಿದರು.

**(ಕ್ರಮ: ಎನ್ಯುಎಂಎಲ್, ಕರ್ನಾಟಕದ ಸರ್ಕಾರ, ಕರ್ನಾಟಕ ಬ್ಯಾಂಕ್, ಎಲ್ಲಾ ಸದಸ್ಯ ಬ್ಯಾಂಕುಗಳು ಮತ್ತು ಎಲ್ಡಿಎಂಗಳು)**

**ಕಾರ್ಯಸೂಚಿ ವಿಷಯ ಸಂಖ್ಯೆ - 20**

**ಡಿಜಿಟಲ್ ಪಾವತಿ ಪರಿಸರ ವ್ಯವಸ್ಥೆಯ ವಿಸ್ತರಣೆ ಮತ್ತು ಆಳಗೊಳಿಸುವಿಕೆ:**

‘ಬಂಧನ್ ಬ್ಯಾಂಕ್’, ‘ಜೆ & ಕೆ ಬ್ಯಾಂಕ್’ ಮತ್ತು ‘ತಮಿಳುನಾಡು ಮರ್ಕಂಟೈಲ್ ಬ್ಯಾಂಕು’ಗಳು 100% ಡಿಜಿಟಲೀಕರಣವನ್ನು ಸಾಧಿಸಿಲ್ಲ ಎಂದು ಕನ್ವೀನರ್ ಮಾಹಿತಿ ನೀಡಿದರು.

31.08.2024ರ ಒಳಗಾಗಿ 100% ಡಿಜಿಟಲೀಕರಣ ಸಾಧಿಸಲು ‘ಬಂಧನ್ ಬ್ಯಾಂಕ್’, ‘ಜೆ &ಕೆ ಬ್ಯಾಂಕ್’ ಮತ್ತು ‘ತಮಿಳುನಾಡು ಮರ್ಕಂಟೈಲ್ ಬ್ಯಾಂಕ್’ಗೆ ‘ಆರ್‌ಬಿಐ’ನ ಪ್ರಾದೇಶಿಕ ನಿರ್ದೇಶಕರು ಸೂಚನೆ ನೀಡಿದರು.

**(ಕ್ರಮ: ಬಂಧನ್ ಬ್ಯಾಂಕ್, ಜೆ&ಕೆ ಬ್ಯಾಂಕ್ ಮತ್ತು ತಮಿಳುನಾಡು ಮರ್ಚೆಂಟೈಲ್ ಬ್ಯಾಂಕ್)**

**ಕಾರ್ಯಸೂಚಿ ವಿಷಯ ಸಂಖ್ಯೆ - 21**

**ವ್ಯವಹಾರ ಪ್ರತಿನಿಧಿಗಳ ಕಾರ್ಯನಿರ್ವಹಣೆ (ವ್ಯವಹಾರ ಪ್ರತಿನಿಧಿಗಳ ಕಾರ್ಯಾಚರಣೆಗಳ ಪರಿಶೀಲನೆ - ಒಳಗೊಂಡಿರುವ ಅಡೆತಡೆಗಳು/ಸಮಸ್ಯೆಗಳು):**

ಫಿನೋ ಪೇಮೆಂಟ್ಸ್ ಬ್ಯಾಂಕ್ (13523), ಯೆಸ್ ಬ್ಯಾಂಕ್ (1323), ಕೆನರಾ ಬ್ಯಾಂಕ್ (839), ಎಕ್ಸಿಸ್ ಬ್ಯಾಂಕ್ (462) ಮತ್ತು ಬ್ಯಾಂಕ್ ಆಫ್ ಬರೋಡಾ (372) ಅತಿ ನಿಷ್ಕ್ರಿಯ (ಇನ್‌ಆಕ್ಟೀವ್) ವ್ಯವಹಾರ ಪ್ರತಿನಿಧಿಗಳನ್ನು(ಬಿಸಿ) ಹೊಂದಿರುವ ಬ್ಯಾಂಕುಗಳು ಎಂದು 'ಎಸ್‌ಎಲ್ಬಿಸಿ' ಸಂಚಾಲಕರು ಮಾಹಿತಿ ನೀಡಿದರು.

ನಿಷ್ಕ್ರಿಯ 'ಬಿಸಿ'ಗಳನ್ನು ಆದಷ್ಟು ಬೇಗ ಚುರುಕುಗೊಳಿಸುವಂತೆ ಕರ್ನಾಟಕದ ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಆರ್‌ಬಿಐ ಪ್ರಾದೇಶಿಕ ನಿರ್ದೇಶಕರು ಮೇಲೆ ತಿಳಿಸಿದ ಬ್ಯಾಂಕುಗಳಿಗೆ ಸಲಹೆ ನೀಡಿದರು.

**(ಕ್ರಮ: ಕೆನರಾ ಬ್ಯಾಂಕ್, ಎಸ್ಬಿಐ, ಯುಬಿಐ, ಬಿಒಬಿ, ಬಿಒಐ, ಇಂಡಿಯನ್ ಬ್ಯಾಂಕ್, ಪಿಎನ್ಬಿ, ಯುಕೋ, ಕರ್ನಾಟಕ ಬ್ಯಾಂಕ್, ಎಚ್‌ಡಿಎಫ್‌ಸಿ, ಎಕ್ಸಿಸ್ ಬ್ಯಾಂಕ್, ಯೆಸ್ ಬ್ಯಾಂಕ್, ಐಡಿಎಫ್‌ಸಿ, ಏರ್ಟೆಲ್ ಪೇಮೆಂಟ್ ಬ್ಯಾಂಕ್ ಮತ್ತು ಫಿನೋ ಪೇಮೆಂಟ್ ಬ್ಯಾಂಕ್)**

**ಕಾರ್ಯಸೂಚಿ ವಿಷಯ ಸಂಖ್ಯೆ 22**

**ಆರ್ಥಿಕ ಸಾಕ್ಷರತಾ ಶಿಬಿರಗಳ ಪರಿಶೀಲನೆ:**

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (17), ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ (10), ಬ್ಯಾಂಕ್ ಆಫ್ ಬರೋಡಾ (1) ಮತ್ತು ಬ್ಯಾಂಕ್ ಆಫ್ ಇಂಡಿಯಾ (1)

30.06.2024ರವರೆಗೆ ಕಾರ್ಯನಿರ್ವಹಿಸದ 'ಎಫ್ಎಲ್ಸಿ'ಗಳನ್ನು ಹೊಂದಿವೆ ಎಂದು ಸಂಚಾಲಕರು ಮಾಹಿತಿ ನೀಡಿದರು.

ಕಾರ್ಯ ನಿರ್ವಹಿಸದ 'ಎಫ್ಎಲ್ಸಿ'ಗಳನ್ನು ಆದಷ್ಟು ಬೇಗ ಕಡಿಮೆ ಮಾಡುವಂತೆ ಅಧ್ಯಕ್ಷರು ಮೇಲೆ ತಿಳಿಸಿದ ಬ್ಯಾಂಕುಗಳಿಗೆ ಸಲಹೆ ನೀಡಿದರು.

**(ಕ್ರಮ: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕ್ ಆಫ್ ಬರೋಡಾ, ಬ್ಯಾಂಕ್ ಆಫ್ ಇಂಡಿಯಾ)**

**ಕಾರ್ಯಸೂಚಿ ವಿಷಯ ಸಂಖ್ಯೆ - 23**

**ಹಣಕಾಸು ಸಾಕ್ಷರತಾ ಕೇಂದ್ರ (ಸಿಎಫ್ಎಲ್):**

ಕೆನರಾ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಬ್ಯಾಂಕ್ ಆಫ್ ಬರೋಡಾ ಪ್ರಾಯೋಜಿತ 79 'ಸಿಎಫ್ಎಲ್'ಗಳು ಕರ್ನಾಟಕ ರಾಜ್ಯದಲ್ಲಿವೆ. ತ್ರೈಮಾಸಿಕದಲ್ಲಿ ಒಟ್ಟು 10,376 ಶಿಬಿರಗಳನ್ನು ನಡೆಸಲಾಗಿದ್ದು, 3,49,818 ಜನರು ಭಾಗವಹಿಸಿದ್ದರು ಎಂದು ಸಂಚಾಲಕರು ಮಾಹಿತಿ ನೀಡಿದರು.

**ಕಾರ್ಯಸೂಚಿ ವಿಷಯ ಸಂಖ್ಯೆ - 24**

**'ಉದ್ದೇಶಿತ ಹಣಕಾಸು ಸೇರ್ಪಡೆ ಮಧ್ಯಸ್ಥಿಕೆ ಕಾರ್ಯಕ್ರಮಕ್ಕಾಗಿ ರಾಜ್ಯ ಮಟ್ಟದ ಅನುಷ್ಠಾನ ಸಮಿತಿ(ಟಿಎಫ್ಐಐಪಿ):**

ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳು 'ಪಿಎಂಜೆಜೆಬಿವೈ' ಮತ್ತು 'ಎಪಿವೈ' ಗುರಿಗಳನ್ನು ಸಾಧಿಸಿವೆ, ಆದರೆ 'ಪಿಎಂಎಸ್ಬಿವೈ' ಮತ್ತು 'ಸಿಎಎಸ್ಎ' ಗುರಿಗಳನ್ನು ಸಾಧಿಸಿಲ್ಲ ಎಂದು ಉಪ ಸಂಚಾಲಕರು ಮಾಹಿತಿ ನೀಡಿದರು.

ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ 'ಪಿಎಂಎಸ್‌ಬಿವೈ'ಮತ್ತು 'ಸಿಎಎಸ್‌ಎ' ಅಡಿಯಲ್ಲಿ ನಿಗದಿಪಡಿಸಿದ ಗುರಿಗಳನ್ನು ಸಾಧಿಸುವಂತೆ ಅವರು ಎಲ್ಲಾ ಸದಸ್ಯ ಬ್ಯಾಂಕುಗಳನ್ನು ವಿನಂತಿಸಿದರು.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕುಗಳು, ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳ ಎಲ್‌ಡಿಎಂ)**

**ಕಾರ್ಯಸೂಚಿ ವಿಷಯ ಸಂಖ್ಯೆ - 25**

**ವರದಿಯಾದ ಸೈಬರ್ ವಂಚನೆಗೆ ಸಂಬಂಧಿಸಿದ ಸಮಸ್ಯೆಗಳು ಮತ್ತು ಬ್ಯಾಂಕಿನ ನೋಡಲ್ ಅಧಿಕಾರಿಗಳ ಪ್ರತಿಕ್ರಿಯೆ ವಿಳಂಬ:**

ಕೆಲವು ಸೈಬರ್ ಅಪರಾಧ ನೋಡಲ್ ಅಧಿಕಾರಿಗಳು ಪೊಲೀಸ್ ಇಲಾಖೆಯ ಕರೆಗಳಿಗೆ ಸ್ಪಂದಿಸುತ್ತಿಲ್ಲ, ಇದರಿಂದಾಗಿ ಅನುಮಾನಾಸ್ಪದ ಖಾತೆಗಳ ತಡೆಹಿಡಿಯಲು (ಫ್ರೀಜ್), ನಿಲ್ಲಿಸಲು, ಸ್ಥಗಿತಗೊಳಿಸಲು ವಿಳಂಬವಾಗುತ್ತಿದೆ ಎಂದು ಪೊಲೀಸ್ ಇಲಾಖೆ ಕಳವಳ ವ್ಯಕ್ತಪಡಿಸಿದೆ ಎಂದು ಉಪಸಂಚಾಲಕರು ಸಭೆಗೆ ಮಾಹಿತಿ ನೀಡಿದರು.

ಕಾನೂನು ಜಾರಿ ಪ್ರಾಧಿಕಾರಗಳು(ಎಲ್‌ಇಎ) ನೀಡಿದ ಕರೆಗಳಿಗೆ ತಕ್ಷಣ ಪ್ರತಿಕ್ರಿಯಿಸುವಂತೆ ಎಲ್ಲಾ ಸದಸ್ಯ ಬ್ಯಾಂಕುಗಳಿಗೆ ಆರ್‌ಬಿಐನ ಪ್ರಾದೇಶಿಕ ನಿರ್ದೇಶಕರು ಸಲಹೆ ನೀಡಿದರು ಮತ್ತು ಪೊಲೀಸ್ ಇಲಾಖೆ 21.08.2024 ರಂದು ನಿಗದಿಪಡಿಸಿರುವ ಸಭೆಯಲ್ಲಿ ಭಾಗವಹಿಸಲು ಎಲ್ಲಾ ಸದಸ್ಯ ಬ್ಯಾಂಕುಗಳಿಗೆ ಸೂಚಿಸಿದರು.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕುಗಳು)**

**ಕಾರ್ಯಸೂಚಿ ವಿಷಯ ಸಂಖ್ಯೆ - 26**

26.1 ಕೆಸಿಸಿ ಸಾಲಗಳು – ವಿತರಣೆಗಳು ಮತ್ತು ಬಾಕಿ:

ಜೂನ್ 2024ರವರೆಗೆ ಬಾಕಿ ಇರುವ ಒಟ್ಟು ‘ಕೆಸಿಸಿ’ಯಲ್ಲಿ 65,995 ಕೋಟಿ ರೂ.ಗಳ ಸಾಧನೆಯಾಗಿದೆ ಎಂದು ‘ಎಸ್ಎಲ್‌ಬಿಸಿ’-ಸಂಚಾಲಕರು ಸಭೆಗೆ ಮಾಹಿತಿ ನೀಡಿದರು. ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಿಗಾಗಿ ಎಲ್ಲಾ ಅರ್ಹ ರೈತರಿಗೆ ‘ಕೆಸಿಸಿ’ ಸಾಲಗಳನ್ನು ಮಂಜೂರು ಮಾಡುವಂತೆ ಎಲ್ಲಾ ಸದಸ್ಯ ಬ್ಯಾಂಕುಗಳನ್ನು ‘ಎಸ್ಎಲ್ಬಿಸಿ’ ಸಂಚಾಲಕರು ವಿನಂತಿಸಿದರು.

ಎಲ್ಲಾ ಅರ್ಹ ಸಣ್ಣ ಮತ್ತು ಅತಿಸಣ್ಣ ರೈತರನ್ನು ‘ಕೆಸಿಸಿ’ ವ್ಯಾಪ್ತಿಗೆ ತರುವಂತೆ ಮುಖ್ಯ ಕಾರ್ಯದರ್ಶಿ ಎಲ್ಲಾ ಸದಸ್ಯ ಬ್ಯಾಂಕುಗಳಿಗೆ ಸೂಚನೆ ನೀಡಿದರು.

**(ಕ್ರಮಗಳು: ಎಲ್ಲಾ ಸದಸ್ಯ ಬ್ಯಾಂಕ್)**

**26.2 ‘ಕೆಸಿಸಿ’-ಹೈನುಗಾರಿಕೆ ಮತ್ತು ಇತರ ಪಶುಸಂಗೋಪನಾ ಚಟುವಟಿಕೆಗಳು:**

ಬ್ಯಾಂಕುಗಳು 133.86 ಕೋಟಿ ರೂ.ಗಳ 18,011 ‘ಕೆಸಿಸಿ ಎಎಚ್’ ಸಾಲಗಳನ್ನು ಮಂಜೂರು ಮಾಡಿವೆ ಎಂದು ‘ಎಸ್ಎಲ್‌ಬಿಸಿ’ ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು.

ಬ್ಯಾಂಕುಗಳು 85.06 ಕೋಟಿ ರೂ.ಗಳ 3,566 ‘ಕೆಸಿಸಿ’ ಮೀನುಗಾರಿಕೆ ಸಾಲವನ್ನು ಮಂಜೂರು ಮಾಡಿವೆ ಎಂದು ‘ಎಸ್ಎಲ್‌ಬಿಸಿ’ ಸಂಚಾಲಕರು ಸಭೆಗೆ ಮಾಹಿತಿ ನೀಡಿದರು. ಹೆಚ್ಚಿನ ಅರ್ಜಿಗಳನ್ನು ಒದಗಿಸುವಂತೆ ಅಧ್ಯಕ್ಷರು ‘ಕೆಎಂಎಫ್’ಗೆ ಸೂಚನೆ ನೀಡಿದರು.

**(ಕ್ರಮಗಳು: ಎಲ್ಲಾ ಸದಸ್ಯ ಬ್ಯಾಂಕುಗಳು ಹಾಗೂ ಕರ್ನಾಟಕದ ಸರ್ಕಾರದ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ)**

**ಕಾರ್ಯಸೂಚಿ ಅಂಶ ಸಂಖ್ಯೆ - 27**

**ಕೃಷಿ ಮತ್ತು ರೈತ ಕಲ್ಯಾಣ ಯೋಜನೆಗಳ ಇಲಾಖೆ**

**27.1: ಕೃಷಿ ಮೂಲಸೌಕರ್ಯ ನಿಧಿ (ಎಐಎಫ್):**

ಕರ್ನಾಟಕ ರಾಜ್ಯವು ವಿತರಣೆಯಲ್ಲಿ 5ನೇ ಸ್ಥಾನದಲ್ಲಿದೆ ಮತ್ತು ಪ್ಯಾನ್ ಇಂಡಿಯಾ ಆಧಾರದ ಮೇಲೆ ಮಂಜೂರಾತಿಯಲ್ಲಿ 7ನೇ ಸ್ಥಾನದಲ್ಲಿದೆ ಎಂದು ಸಂಚಾಲಕರು ಮಾಹಿತಿ ನೀಡಿದರು.

ಇದಲ್ಲದೆ, 2024-25ರ ಹಣಕಾಸು ವರ್ಷದಲ್ಲಿ ಬ್ಯಾಂಕುಗಳು 281.52 ಕೋಟಿ ಮೊತ್ತದ 255 ಖಾತೆಗಳನ್ನು ಮಂಜೂರು ಮಾಡಿವೆ ಎಂದು ಸಂಚಾಲಕರು ಮಾಹಿತಿ ನೀಡಿದರು.

ಇದಲ್ಲದೆ, ಮಂಜೂರಾತಿ ಅಡಿಯಲ್ಲಿ ಬಾಕಿ ಇರುವ ಅರ್ಜಿಗಳನ್ನು ಇತ್ಯರ್ಥಗೊಳಿಸಲು ಮತ್ತು ಸಾಲ ಮೊತ್ತವನ್ನು ವಿತರಿಸಲು ಅವರು ಎಲ್ಲಾ ಸದಸ್ಯ ಬ್ಯಾಂಕುಗಳಿಗೆ ಸೂಚನೆ ನೀಡಿದರು. ಅಲ್ಲದೆ, ಬಾಕಿ ಇರುವ ಮತ್ತು ಅಸ್ತಿತ್ವದಲ್ಲಿರುವ ಎಲ್ಲಾ ಅರ್ಜಿಗಳಿಗೆ, ಬ್ಯಾಂಕುಗಳು 'ಕೃಷಿ ಮ್ಯಾಪರ್' ತಂತ್ರಾಂಶ ಬಳಸಿ 'ಜಿಯೋ-ಟ್ಯಾಗಿಂಗ್' ಅನ್ನು ಪೂರ್ಣಗೊಳಿಸುವಂತೆ ಸೂಚಿಸಿದರು.

**(ಕ್ರಮಗಳು: ಎಲ್ಲಾ ಸದಸ್ಯ ಬ್ಯಾಂಕುಗಳು)**

**27.2: ವಿದ್ಯುನ್ಮಾನ ವರ್ಗಾಯಿಸಬಹುದಾದ ಗೋದಾಮು ರಸೀದಿ (ಇ-ಎನ್‌ಡಬ್ಲ್ಯೂ ಆರ್) ಮೂಲಕ ಕೃಷಿ ಸರಕುಗಳಿಗೆ ಅಡಮಾನ ಹಣಕಾಸು:**

30.06.2024 ರವರೆಗೆ ಬ್ಯಾಂಕುಗಳು 1420 ಕೋಟಿ ರೂ.ಗಳ 2824 ಸಾಲಗಳನ್ನು ಬಾಕಿ ಉಳಿಸಿಕೊಂಡಿವೆ ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು.

**27.3: ‘ಪಶು ಮೂಲಸೌಕರ್ಯ ಅಭಿವೃದ್ಧಿ ನಿಧಿ’ ಅಡಿ ಪಶುಸಂಗೋಪನೆ ಕಾರ್ಯಕ್ಷಮತೆ:**

‘ಆತ್ಮನಿರ್ಭರ ಭಾರತ’ ಪ್ಯಾಕೇಜ್ ಅಡಿ, ಈ ಯೋಜನೆ ಪ್ರಾರಂಭಿಸಲಾಗುತ್ತಿದೆ ಎಂದು ಉಪಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು. ಶಾಖೆ ಮಟ್ಟದಲ್ಲಿ ಯೋಜನೆಯ ಪ್ರಚಾರ ಮಾಡುವಂತೆ ಅವರು ಎಲ್ಲಾ ಬ್ಯಾಂಕುಗಳಿಗೆ ಸಲಹೆ ನೀಡಿದರು.

**(ಕ್ರಮಗಳು: ಎಲ್ಲಾ ಸದಸ್ಯ ಬ್ಯಾಂಕುಗಳು)**

27.4: ರೈತ ಉತ್ಪಾದಕ ಕಂಪನಿಗಳು / ರೈತ ಉತ್ಪಾದಕ ಸಂಸ್ಥೆಗಳಿಗೆ ಹಣಕಾಸು:

30.06.2024ರ ವರೆಗೆ ಬ್ಯಾಂಕುಗಳು 3.35 ಕೋಟಿ ರೂ. ಮೊತ್ತದ 15 ಸಾಲಗಳನ್ನು ಮಂಜೂರು ಮಾಡಿವೆ ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು.

**27.5: ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ (ಪಿಎಂಎಫ್‌ಬಿವೈ):**

‘ಎನ್‌ಪಿಸಿಐ’ ಪಾವತಿ ವೈಫಲ್ಯ ಮತ್ತು ವಿವಿಧ ಸದಸ್ಯ ಬ್ಯಾಂಕುಗಳಿಂದ ಆಧಾರ್ ಸಂಖ್ಯೆ ಲಭ್ಯವಿರದ ಕಾರಣದಿಂದಾಗಿ ‘ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ’(ಪಿಎಂಎಫ್‌ಬಿವೈ) ಅಡಿ, 2.84 ಕೋಟಿ ರೂ.ಗಳ 1935 ಪ್ರಸ್ತಾವನೆಗಳು ಇತ್ಯರ್ಥವಾಗದೆ ಬಾಕಿ ಉಳಿದಿವೆ ಎಂದು ಕರ್ನಾಟಕ ಸರ್ಕಾರದ ಕೃಷಿ ಇಲಾಖೆಯ ಆಯುಕ್ತರು ಮಾಹಿತಿ ನೀಡಿದರು.

ಆಧಾರ್ ಸಂಖ್ಯೆ ಲಭ್ಯವಿರದ ಪ್ರಕರಣಗಳಿಂದಾಗಿ ವೈಫಲ್ಯ ಪ್ರಕರಣಗಳ ಅಂಕಿಅಂಶಗಳ ಬಗ್ಗೆ ತಮಗೆ ತಿಳಿದಿದೆ ಎಂದು ಐಸಿಐಸಿಐ ಬ್ಯಾಂಕಿನ ಅಧಿಕಾರಿಯೊಬ್ಬರು ಸಭೆಗೆ ಮಾಹಿತಿ ನೀಡಿದರು. ಎಲ್ಲಾ ಪ್ರಕರಣಗಳನ್ನು ಆದಷ್ಟು ಬೇಗ ಇತ್ಯರ್ಥಗೊಳಿಸಲಾಗುವುದು ಎಂದು ಅವರು ಮಾಹಿತಿ ನೀಡಿದರು.

**(ಕ್ರಮಗಳು: ಐಸಿಐಸಿಐ ಬ್ಯಾಂಕ್)**

**27.6: ಪುನರ್‌ರಚಿತ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ:**

ಪುನರ್‌ರಚಿತ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ (ಆರ್‌ಡಬ್ಲ್ಯೂಬಿಸಿಐಎಸ್) ಅಡಿ ಒಟ್ಟು 61.43 ಕೋಟಿ ರೂ.ಗಳು ಇತ್ಯರ್ಥಕ್ಕೆ ಬಾಕಿ ಇದೆ.

ಬಾಕಿ ಇರುವ ಕ್ಲೇಮ್‌ಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ವಿಮಾ ಕಂಪನಿಗಳಿಗೆ ಸಲಹೆ ನೀಡುವಂತೆ ಕರ್ನಾಟಕ ಸರ್ಕಾರದ ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಯನ್ನು 'ಎಸ್‌ಎಲ್‌ಬಿಸಿ' ವಿನಂತಿಸಿತು.

**(ಕ್ರಮಗಳು: ಕರ್ನಾಟಕ ಸರ್ಕಾರದ ಕೃಷಿ ಮತ್ತು ತೋಟಗಾರಿಕೆ ಇಲಾಖೆ ಹಾಗೂ ಎಲ್ಲಾ ಸದಸ್ಯ ಬ್ಯಾಂಕ್‌ಗಳು)**

**ಕಾರ್ಯಸೂಚಿ ವಿಷಯ ಸಂಖ್ಯೆ - 28**

**ಪಿಎಂಎವೈ-ಯು: ರಾಜೀವ್ ಗಾಂಧಿ ಹೌಸಿಂಗ್ ಕಾರ್ಪೊರೇಷನ್ ಲಿಮಿಟೆಡ್:**

ಕೇವಲ 3390 ಮನೆಗಳು ಮಾತ್ರ ಸಿದ್ಧವಾಗಿವೆ, ಪೂರ್ಣಗೊಳ್ಳುವ ಹಂತದಲ್ಲಿವೆ ಮತ್ತು ಅವುಗಳಿಗೆ ಮಾತ್ರ ಆದ್ಯತೆ ನೀಡಬೇಕಾಗಿದೆ ಎಂದು ಇಲಾಖೆ ದೃಢಪಡಿಸಿದೆ. ಅದರಂತೆ, ಬ್ಯಾಂಕುಗಳು ಆ ಮನೆಗಳಿಗೆ ಮಾತ್ರ ಹಣಕಾಸು ಒದಗಿಸಲು ಸಾಧ್ಯವಾಗುತ್ತದೆ ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು.

ಯೋಜನಾ ಕಾರ್ಯ ಪೂರ್ಣಗೊಂಡ ಅರ್ಹ ಫಲಾನುಭವಿಗಳ ಸಂಪೂರ್ಣ ಪಟ್ಟಿಯನ್ನು ಸದಸ್ಯ ಬ್ಯಾಂಕುಗಳಿಗೆ ಸಲ್ಲಿಸುವಂತೆ ಇಲಾಖೆಗೆ 'ಎಸ್‌ಎಲ್‌ಬಿಸಿ' ಮನವಿ ಮಾಡಿತು.

**(ಕ್ರಮ: ಆರ್‌ಜಿಎಚ್‌ಸಿಎಲ್ ಇಲಾಖೆ, ಕರ್ನಾಟಕ ಸರ್ಕಾರ)**

**ಕಾರ್ಯಸೂಚಿ ವಿಷಯ ಸಂಖ್ಯೆ - 29**

**ಸರ್ಕಾರಿ ಪ್ರಾಯೋಜಿತ ಯೋಜನೆಗಳು ಮತ್ತು ಸರ್ಕಾರಿ ಪ್ರಾಯೋಜಿತ ಉಪಕ್ರಮಗಳಿಗೆ (ಡಿಎವೈ-ಎನ್ಆರ್ಎಲ್ಎಂ, ಡಿಎವೈ-ಎನ್ಯುಎಲ್ಎಂ, ಮುದ್ರಾ, ಸ್ಟ್ಯಾಂಡ್ ಅಪ್ ಇಂಡಿಯಾ, ಇತ್ಯಾದಿ) ಸಾಲ ನೀಡುವ ಬಗ್ಗೆ ಚರ್ಚೆ ಮತ್ತು ಈ ಯೋಜನೆಗಳ ಪರಿಣಾಮ.**

**29.1: 30.06.2024 ರಂತೆ 'ಪಿಎಂಇಜಿಪಿ' ಕಾರ್ಯಕ್ಷಮತೆ:**

ಪಿಎಂಇಜಿಪಿ ಯೋಜನೆಯಡಿ ಬಾಕಿ ಇರುವ ಅರ್ಜಿಗಳನ್ನು ತೆರವುಗೊಳಿಸಬೇಕು, ಇದು ರಾಜ್ಯದ ನಿರುದ್ಯೋಗಿ ಯುವಕರಿಗೆ ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಸಹಾಯ ಮಾಡುತ್ತದೆ ಎಂದು ಸಂಚಾಲಕರು ಸದಸ್ಯ ಬ್ಯಾಂಕುಗಳನ್ನು ವಿನಂತಿಸಿದರು.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕುಗಳು)**

**29.2 ಅಲ್ಪಸಂಖ್ಯಾತ ಸಮುದಾಯಗಳಿಗೆ ಸಾಲದ ಹರಿವು:**

**ಕಾರ್ಯಸೂಚಿ 29.2.1: ರಾಜ್ಯದ ಅಲ್ಪಸಂಖ್ಯಾತ ಸಮುದಾಯಗಳಿಗೆ ಹಣಕಾಸು ಅಡಿಯಲ್ಲಿ ಪ್ರಗತಿ:**

30.06.2024 ರ ವೇಳೆಗೆ ಅಲ್ಪಸಂಖ್ಯಾತ ಸಮುದಾಯಗಳಿಗೆ ಬಾಕಿ ಇರುವ ಸಾಲಗಳು 47,661 ಕೋಟಿ ರೂ.ಗಳಾಗಿವೆ, ಇದು ಒಟ್ಟು 'ಪಿಎಸ್ಎ'ದ ಶೇ. 10ರಷ್ಟು ಆಗಿದೆ ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು.

ಕರ್ನಾಟಕ ರಾಜ್ಯದ ಅಲ್ಪಸಂಖ್ಯಾತ ಸಮುದಾಯಕ್ಕೆ ಗರಿಷ್ಠ ಸಾಲಗಳನ್ನು ಮಂಜೂರು ಮಾಡುವ ಮೂಲಕ 2024-25ರ ಹಣಕಾಸು ವರ್ಷದಲ್ಲಿ ದುರ್ಬಲ ವರ್ಗಗಳಿಗೆ

‘ಪಿಎಸ್‌ಎ’ ಸಾಲದ ಅಡಿ ಕಡ್ಡಾಯ ಅವಶ್ಯಕತೆಗಳನ್ನು ಸಾಧಿಸಲು ‘ಎಸ್‌ಎಲ್‌ಬಿಸಿ’ ಎಲ್ಲಾ ಸದಸ್ಯ ಬ್ಯಾಂಕುಗಳಿಗೆ ಮನವಿ ಮಾಡಿತು.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕುಗಳು, ‘ಎಲ್‌ಡಿಎಂ’ಗಳು ಮತ್ತು ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ-ಕರ್ನಾಟಕ ಸರ್ಕಾರ)**

**ಕಾರ್ಯಸೂಚಿ 29.2.2: ರಾಜ್ಯದ ಗುರುತಿಸಲಾದ ಜಿಲ್ಲೆಗಳಲ್ಲಿ ‘ಅಲ್ಪಸಂಖ್ಯಾತ ಸಮುದಾಯಗಳಿಗೆ ಹಣಕಾಸು’ ಅಡಿಯಲ್ಲಿ ಆಗಿರುವ ಪ್ರಗತಿ:**

2024-25ನೇ ಸಾಲಿಗೆ ಅಲ್ಪಸಂಖ್ಯಾತ ಸಮುದಾಯಗಳಿಗೆ ಹೆಚ್ಚಿನ ಸಾಲ ನೀಡುವಂತೆ ಶಾಖೆಗಳಿಗೆ ಸಲಹೆ ನೀಡುವಂತೆ ಬೀದರ್ (ಎಸ್‌ಬಿಐ), ಕಲಬುರಗಿ (ಎಸ್‌ಬಿಐ) ಜಿಲ್ಲೆಗಳು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ (ಕೆನರಾ ಬ್ಯಾಂಕ್) ಲೀಡ್ ಜಿಲ್ಲಾ ಮ್ಯಾನೇಜರ್‌ಗಳಿಗೆ ‘ಎಸ್‌ಎಲ್‌ಬಿಸಿ’ ಮನವಿ ಮಾಡಿತು.

**(ಕ್ರಮ: ‘ಎಲ್‌ಡಿಎಂ’ಗಳು ಬೀದರ್, ಕಲ್ಬುರ್ಗಿ, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಎಲ್ಲಾ ಸದಸ್ಯ ಬ್ಯಾಂಕುಗಳು)**

**29.3: ಎಸ್‌ಹೆಚ್‌ಜಿ-ಬ್ಯಾಂಕ್ ಸಂಪರ್ಕ / ಜಂಟಿ ಹೊಣೆಗಾರಿಕೆ ಗುಂಪುಗಳ ಅಡಿಯಲ್ಲಿ ಪ್ರಗತಿ:**

**ಸ್ವಸಹಾಯ ಗುಂಪುಗಳ (ಎಸ್‌ಹೆಚ್‌ಜಿ) ಅಡಿಯಲ್ಲಿ ಪ್ರಗತಿ:**

2024-25ರ ಆರ್ಥಿಕ ವರ್ಷದಲ್ಲಿ ಸ್ವಸಹಾಯ ಗುಂಪುಗಳಿಗೆ 2,562 ಕೋಟಿ ರೂ. ಸಾಲ ಸೌಲಭ್ಯ ಕಲ್ಪಿಸಲಾಗಿದೆ ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು.

ಇದಲ್ಲದೆ, ರಾಜ್ಯದ ಎಲ್ಲಾ ಅರ್ಹ ‘ಎಸ್‌ಹೆಚ್‌ಜಿ’ ಖಾತೆಗಳಿಗೆ ಸಾಲ ನೀಡಲು ಒತ್ತು ಕೊಡಬೇಕೆಂದು ಅವರು ಸದಸ್ಯ ಬ್ಯಾಂಕುಗಳನ್ನು ವಿನಂತಿಸಿದರು.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕುಗಳು)**

**ಜಂಟಿ ಹೊಣೆಗಾರಿಕೆ ಗುಂಪುಗಳ(ಜೆಎಲ್‌ಜಿ) ಅಡಿಯಲ್ಲಿ ಪ್ರಗತಿ:**

ಜೂನ್ 30, 2024ರ ವೇಳೆಗೆ 'ಜೆಎಲ್‌ಜಿ'ಗಳ ಅಡಿಯಲ್ಲಿ ಒಟ್ಟು ಬಾಕಿ 18368.00 ಕೋಟಿ ರೂ.ಗಳಾಗಿದೆ ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು ಮತ್ತು ನಿಗದಿಪಡಿಸಿದ ಗುರಿಗಳನ್ನು ಸಾಧಿಸುವತ್ತ ಗಮನ ಹರಿಸುವಂತೆ ಸದಸ್ಯ ಬ್ಯಾಂಕುಗಳನ್ನು ವಿನಂತಿಸಿದರು.

**(ಕ್ರಮ: 'ಎಲ್‌ಡಿಎಂ' ಮತ್ತು ಎಲ್ಲಾ ಸದಸ್ಯ ಬ್ಯಾಂಕುಗಳು)**

**29.4: 30.06.2024 ರಂತೆ 'ಸ್ಟ್ಯಾಂಡ್ ಅಪ್ ಇಂಡಿಯಾ' (ಎಸ್‌ಯುಐ) ಯೋಜನೆಯಲ್ಲಿ ಪ್ರಗತಿ**

'ಸ್ಟ್ಯಾಂಡ್ ಅಪ್ ಇಂಡಿಯಾ' ಯೋಜನೆಯಡಿ ಜೂನ್ 2024ರವರೆಗೆ ಬ್ಯಾಂಕುಗಳು 55 ಕೋಟಿ ರೂ.ಗಳನ್ನು ಮಂಜೂರು ಮಾಡಿವೆ ಎಂದು ಸಂಚಾಲಕರು ಸದನದ ಗಮನಕ್ಕೆ ತಂದರು.

ನಿಗದಿತ ಗುರಿಯನ್ನು ಸಾಧಿಸಲು ಗರಿಷ್ಠ ಸಂಖ್ಯೆಯ ಅರ್ಜಿಗಳನ್ನು ಪಡೆಯುವಂತೆ 'ಎಂಎಸ್‌ಎಂಇ' ಇಲಾಖೆ, ಎಸ್ಸಿ, ಎಸ್ಟಿ ನಿಗಮ, ಕೆವಿಐಸಿ ಮತ್ತು ಡಿಐಸಿಸಿಗೆ ಸಂಚಾಲಕರು ವಿನಂತಿಸಿದರು.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕುಗಳು ಮತ್ತು 'ಎಲ್‌ಡಿಎಂ'ಗಳು)**

**29.5: 'ಮುದ್ರಾ' ಯೋಜನೆಯಡಿ ಮಂಜೂರಾದ ಅನುದಾನದಲ್ಲಿ ಪ್ರಗತಿ:**

ಏಪ್ರಿಲ್ 1, 2024ರಿಂದ ಜೂನ್ 30, 2024ರ ವರೆಗೆ ಸದಸ್ಯ ಬ್ಯಾಂಕುಗಳು 8645 ಕೋಟಿ ರೂ. ಮೌಲ್ಯದ 927510 ಮುದ್ರಾ ಸಾಲಗಳನ್ನು ಮಂಜೂರು ಮಾಡಿವೆ ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು.

ಎಲ್ಲಾ ಸದಸ್ಯ ಬ್ಯಾಂಕುಗಳ ಸಕ್ರಿಯ ಭಾಗವಹಿಸುವಿಕೆ ಮತ್ತು ಸಂಬಂಧಿತ ಇಲಾಖೆಯ ಬೆಂಬಲದೊಂದಿಗೆ 'ಮುದ್ರಾ' ಸಾಲ ಮಂಜೂರಾತಿ ಮತ್ತು ವಿತರಣೆಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯವು ದೇಶದಲ್ಲಿ 2ನೇ ಸ್ಥಾನವನ್ನು ಗಳಿಸಿದೆ ಎಂದು ಸಂಚಾಲಕರು ಮಾಹಿತಿ ನೀಡಿದರು.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕುಗಳು)**

**29.6 'ಪಿಎಂಎಫ್ಎಂಇ' ಯೋಜನೆಯಡಿ ಪ್ರಗತಿ:**

ಯೋಜನೆಯ ಅಡಿ ಮಂಜೂರು ಮತ್ತು ವಿತರಣೆಗೆ ಬಾಕಿ ಉಳಿಸಿಕೊಂಡಿರುವ ಬ್ಯಾಂಕುಗಳು ತ್ವರಿತ ಗತಿಯಲ್ಲಿ ಇತ್ಯರ್ಥಗೊಳಿಸುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಎಲ್ಲಾ ಬ್ಯಾಂಕುಗಳಿಗೆ ಸೂಚನೆ ನೀಡಿದರು. ಇದಲ್ಲದೆ, ಸಾಲ ಪ್ರಕ್ರಿಯೆಯ ಸಮಯ ಕಡಿಮೆ ಮಾಡಲು ಚೆಕ್ ಲಿಸ್ಟ್ ಜೊತೆಗೆ ಸರಳೀಕೃತ ಅರ್ಜಿ ಸಿದ್ಧಪಡಿಸಬೇಕು ಎಂದು ಅವರು ಮಾಹಿತಿ ನೀಡಿದರು.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕುಗಳು, 'ಎಲ್‌ಡಿಎಂ'ಗಳು, 'ಪಿಎಂಎಫ್ಎಂಇ' ವಿಶೇಷ ಅಧಿಕಾರಿ, ಕೃಷಿ ಇಲಾಖೆ-ಕೆಎಪಿಇಸಿ)**

**29.7: ಪಿಎಂಜೆಡಿವೈ ಖಾತೆಯಲ್ಲಿ 'ಆಧಾರ್ ಸೀಡಿಂಗ್' ಅಡಿ ಪ್ರಗತಿ:**

30.06.2024ರ ವೇಳೆಗೆ 'ಪಿಎಂಜೆಡಿವೈ' ಖಾತೆಗಳಲ್ಲಿ 77.00% ಆಧಾರ್ ಜೋಡಣೆಯಾಗಿದೆ ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು.

ಮುಖ್ಯವಾಗಿ ‘ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ’ ಮತ್ತು ‘ಪಂಜಾಬ್ ನ್ಯಾಷನಲ್ ಬ್ಯಾಂಕ್’ ಕಾರಣದಿಂದಾಗಿ 7,81,850 ‘ಪಿಎಂಜೆಡಿವೈ’ ಆಧಾರ್ ಸೀಡಿಂಗ್ ಖಾತೆಗಳು ಕಡಿಮೆಯಾಗಿವೆ ಎಂದು ತಿಳಿಸಿದರು.

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ 5,78,847 ಖಾತೆಗಳನ್ನು ಕಡಿತಗೊಳಿಸಿದೆ. ಕೇಂದ್ರ ಕಚೇರಿಯಿಂದ ಡೇಟಾವನ್ನು ಹೊರತೆಗೆಯುವಾಗ ತರ್ಕದಲ್ಲಿನ ಬದಲಾವಣೆಯಿಂದಾಗಿ, ಬ್ಯಾಂಕ್‌ನವರು 14,23,555ರ ಬದಲು 8,35,695 ಅಪ್‌ಲೋಡ್ ಮಾಡಿದ್ದಾರೆ ಮತ್ತು ಈಗ ಅದನ್ನು ಸರಿಪಡಿಸಿದ್ದಾರೆ ಎಂದು ಯುಬಿಐ ತಿಳಿಸಿದೆ.

2,30,329 ಆಧಾರ್ ಸೀಡಿಂಗ್ ಖಾತೆಗಳ ಬದಲು 1,84,891 ಅನ್ನು ತಪ್ಪಾಗಿ ಅಪ್‌ಲೋಡ್ ಮಾಡಲಾಗಿದೆ ಮತ್ತು ಈಗ ಅದನ್ನು ಸರಿಪಡಿಸಲಾಗಿದೆ ಎಂದು ಪಿಎನ್‌ಬಿ ತಿಳಿಸಿದೆ ಎಂದು ಅವರು ಮಾಹಿತಿ ನೀಡಿದರು.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕುಗಳು ಮತ್ತು ಎಲ್ಲಾ ‘ಎಲ್‌ಡಿಎಂ’ಗಳು)**

**29.8: 2024-25ರ ಹಣಕಾಸು ವರ್ಷದಲ್ಲಿ ವಾರ್ಷಿಕ ಅಟಲ್ ಪಿಂಚಣಿ ಯೋಜನೆ (ಎಪಿವೈ) ಗುರಿಗಳ ಅಡಿಯಲ್ಲಿ ಬ್ಯಾಂಕುಗಳ ಕಾರ್ಯಕ್ಷಮತೆ: (01.04.2024 ರಿಂದ 30.06.2024 ರವರೆಗೆ)**

30.06.2024ರ ವೇಳೆಗೆ 2024-25ರ ಹಣಕಾಸು ವರ್ಷದಲ್ಲಿ ‘ಪಿಎಫ್‌ಆರ್‌ಡಿಎ’ ನಿಗದಿಪಡಿಸಿದ ‘ಎಪಿವೈ’ ಗುರಿಯ 23% ಅನ್ನು ಕರ್ನಾಟಕ ರಾಜ್ಯವು ಸಾಧಿಸಿದೆ ಮತ್ತು ಬ್ಯಾಂಕುಗಳ ಕಾರ್ಯಕ್ಷಮತೆ ಉತ್ತಮವಾಗಿಲ್ಲ ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು. ಬ್ಯಾಂಕುಗಳು ‘ಎಪಿವೈ’ ಅಡಿಯಲ್ಲಿ ಸಮರೋಪಾದಿಯಲ್ಲಿ ಗರಿಷ್ಠ ಅರ್ಜಿಗಳನ್ನು ನೋಂದಾಯಿಸಬೇಕು ಎಂದು ಸೂಚಿಸಿದರು.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕುಗಳು ಮತ್ತು ‘ಎಲ್‌ಡಿಎಂ’ಗಳು)**

**29.9 ಕೇಂದ್ರ ವಲಯದ ಬಡ್ಡಿ ಸಬ್ಸಿಡಿ (ಸಿಎಸ್ಐಎಸ್) ಯೋಜನೆಯ ಕಾರ್ಯಕ್ಷಮತೆ ಪರಿಶೀಲನೆ**

ಕೇಂದ್ರ ವಲಯದ ಬಡ್ಡಿ ಸಬ್ಸಿಡಿ (ಸಿಎಸ್ಐಎಸ್) ಯೋಜನೆಯ ಕಾರ್ಯಕ್ಷಮತೆ ಪರಿಶೀಲನೆಗೆ ಸಂಬಂಧಿಸಿದಂತೆ 'ಎಸ್ಎಲ್‌ಬಿಸಿ'ಯು 'ಡಿಎಫ್ಎಸ್'ನಿಂದ ಸಂವಹನವನ್ನು ಸ್ವೀಕರಿಸಿದೆ. ಈ ಯೋಜನೆಯಡಿ, ಎಲ್ಲಾ ಮೂಲಗಳಿಂದ ಪೋಷಕರ ವಾರ್ಷಿಕ ಆದಾಯ 4.5 ಲಕ್ಷ ರೂ.ಗಳವರೆಗೆ ಇರುವ ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳು ನಿಗದಿತ ಬ್ಯಾಂಕುಗಳಿಂದ ಪಡೆದ ಶಿಕ್ಷಣ ಸಾಲಗಳಿಗೆ 'ಮಾರಟೋರಿಯಂ' ಅವಧಿಯಲ್ಲಿ (ಕೋರ್ಸ್ ಅವಧಿ ಮತ್ತು ಒಂದು ವರ್ಷ) ಬಡ್ಡಿ ಸಹಾಯಧನವನ್ನು ನೀಡಲಾಗುತ್ತದೆ.

ಪರಿಶೀಲನಾ ಉದ್ದೇಶಗಳಿಗಾಗಿ ಅರ್ಹ ಖಾತೆ ಪಟ್ಟಿಯನ್ನು ಒದಗಿಸುವಂತೆ ಸಂಚಾಲಕರು ಎಲ್ಲಾ ಸದಸ್ಯ ಬ್ಯಾಂಕುಗಳನ್ನು ವಿನಂತಿಸಿದರು.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕುಗಳು)**

**ಕಾರ್ಯಸೂಚಿ ವಿಷಯ ಸಂಖ್ಯೆ – 30**

**ಹಣಕಾಸು ಸೇರ್ಪಡೆ ಉಪಕ್ರಮಗಳು, ಬ್ಯಾಂಕಿಂಗ್ ಜಾಲದ ವಿಸ್ತರಣೆ ಮತ್ತು ಹಣಕಾಸು ಸಾಕ್ಷರತೆಯ ಪರಾಮರ್ಶೆ:**

'ಜನ್ ಧನ್ ದರ್ಶಕ್' ಪೋರ್ಟಲ್ ಪ್ರಕಾರ, ಜೂನ್ 2024ರ ಹೊತ್ತಿಗೆ, 5 ಕಿ.ಮೀ ವ್ಯಾಪ್ತಿಯಲ್ಲಿ ಯಾವುದೇ ಶಾಖೆ, 'ಬಿ.ಸಿ' ಅಥವಾ 'ಐಪಿಪಿಬಿ' ಇಲ್ಲದ, ಯಾವುದೇ ಬ್ಯಾಂಕ್ ಸೌಲಭ್ಯವಿಲ್ಲದ ಗ್ರಾಮಗಳಿಲ್ಲ ಎಂದು ಪ ಸಂಚಾಲಕರು ಮಾಹಿತಿ ನೀಡಿದರು.

**ಕಾರ್ಯಸೂಚಿ ವಿಷಯ ಸಂಖ್ಯೆ - 31**

**ಬ್ರಾಂಚ್ ಸಂಪರ್ಕ ಜಾಲ:**

ಬ್ಯಾಂಕ್ ಶಾಖೆಗಳ ಸಂಖ್ಯೆ ಮಾರ್ಚ್ 31, 2024ರ ವೇಳೆಗೆ 12,261 ಇದ್ದು, ಜೂನ್ 30, 2024ರ ವೇಳೆಗೆ 12,310ಕ್ಕೆ ಏರಿದೆ, ತ್ರೈಮಾಸಿಕ ಆಧಾರದ ಮೇಲೆ 49 ಶಾಖೆಗಳ ಹೆಚ್ಚಳವನ್ನು ಇದು ಸೂಚಿಸುತ್ತದೆ ಎಂದು ಸಂಚಾಲಕರು ಮಾಹಿತಿ ನೀಡಿದರು.

**ಕಾರ್ಯಸೂಚಿ ವಿಷಯ ಸಂಖ್ಯೆ - 32**

**ಗ್ರಾಮೀಣ ಬ್ಯಾಂಕ್ ಶಾಖೆ ಮುಚ್ಚುವಿಕೆ / ವಿಲೀನ / ಸ್ಥಳಾಂತರದ ಸ್ಥಿತಿಗತಿ:**

ಈ ಸಂಬಂಧ 'ಎಲ್‌ಡಿಎಂ'ಗಳಿಂದ ಯಾವುದೇ ವಿನಂತಿಗಳನ್ನು 'ಎಸ್‌ಎಲ್‌ಬಿಸಿ' ಸ್ವೀಕರಿಸಿಲ್ಲ ಎಂದು ಸಂಚಾಲಕರು ಮಾಹಿತಿ ನೀಡಿದರು.

**ಕಾರ್ಯಸೂಚಿ ವಿಷಯ ಸಂಖ್ಯೆ - 33**

**ಎಟಿಎಂ ಸಂಪರ್ಕಜಾಲ:**

ಜೂನ್ 30, 2024ರ ವೇಳೆಗೆ ಒಟ್ಟು 'ಎಟಿಎಂ'ಗಳ ಸಂಖ್ಯೆ 16,705 ಇದ್ದು, ಇದು ಮಾರ್ಚ್ 31, 2024ರ ವೇಳೆಗೆ 17,062 ರಷ್ಟಿತ್ತು. ಇದು 357 ಎಟಿಎಂಗಳ ಇಳಿಕೆಯನ್ನು ತೋರಿಸುತ್ತದೆ ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು.

**ಕಾರ್ಯಸೂಚಿ ವಿಷಯ ಸಂಖ್ಯೆ - 34**

**ಸಕ್ರಿಯವಾಗಿರುವ 'ಸಿಎಎಸ್‌ಎ' ಖಾತೆಗಳ ಆಧಾರ್ ಸೀಡಿಂಗ್ ಅಡಿಯಲ್ಲಿ ಪ್ರಗತಿ:**

**ಜೂನ್ 30, 2024ರ ವೇಳೆಗೆ ಆಧಾರ್ ಸೀಡಿಂಗ್ ಶೇಕಡಾ 90 ರಷ್ಟಿದೆ ಎಂದು ಸಂಚಾಲಕರು ಮಾಹಿತಿ ನೀಡಿದರು.**

ಇದಲ್ಲದೆ, ಎಲ್ಲಾ ಸದಸ್ಯ ಬ್ಯಾಂಕುಗಳು ಮತ್ತು 'ಎಲ್‌ಡಿಎಂ'ಗಳು ತಮ್ಮ ಶಾಖೆಗಳನ್ನು ಜಾಗೃತಗೊಳಿಸಬೇಕು. ಹೆಚ್ಚಿನ ಸಂಖ್ಯೆಯಲ್ಲಿ 'ಆಧಾರ್' ಸಂಖ್ಯೆ ಆಧಾರಿತ 'ಆನ್‌ಲೈನ್

‘ಡಿ.ಬಿ.ಟಿ’ ಪಾವತಿಗೆ ಅನುವುಮಾಡಿಕೊಡಲು ಹಾಗೂ ಡಿಜಿಟಲ್ ಬ್ಯಾಂಕಿಂಗ್ ಅನ್ನು ಜನಪ್ರಿಯಗೊಳಿಸಲು ‘ಆಧಾರ್ ಸೀಡಿಂಗ್’ ಅನ್ನು ಮತ್ತಷ್ಟು ಸುಧಾರಿಸುವ ವ್ಯವಸ್ಥೆಗಳನ್ನು ಮಾಡಬೇಕು ಎಂದು ಸಂಚಾಲಕರು ವಿನಂತಿಸಿದರು.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕುಗಳು ಮತ್ತು ‘ಎಲ್‌ಡಿಎಂ’ಗಳು)**

**ಕಾರ್ಯಸೂಚಿ ವಿಷಯ ಸಂಖ್ಯೆ – 35**

**ವಲಯವಾರು ಅನುತ್ಪಾದಕ ಆಸ್ತಿಗಳ(ಎನ್‌ಪಿಎ) ಸ್ಥಿತಿಗತಿ**

**35.1: 30.06.2024ರಂತೆ ಅನುತ್ಪಾದಕ ಆಸ್ತಿಗಳ ಸ್ಥಿತಿಗತಿ:**

ಜೂನ್ 30, 2024ರ ವೇಳೆಗೆ ಒಟ್ಟು ಅನುತ್ಪಾದಕ ಆಸ್ತಿ 54,179.00 ಕೋಟಿ ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು.

**35.2: ‘ಪಿಎಂಇಜಿಪಿ’ ಅಡಿಯಲ್ಲಿ ಬ್ಯಾಂಕ್ ಬಾಕಿ ವಸೂಲಿ:**

ಪಿಎಂಇಜಿಪಿ ಅಡಿಯಲ್ಲಿ ‘ಎನ್‌ಪಿಎ’ ಪಾಲು 21% ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು. ಈ ಯೋಜನೆಯಲ್ಲಿ ಶೇಕಡಾವಾರು ‘ಎನ್‌ಪಿಎ’ ತುಂಬಾ ಹೆಚ್ಚಾಗಿರುವುದರಿಂದ, ಸಾಲ ವಸೂಲಾತಿಗಾಗಿ ಬ್ಯಾಂಕುಗಳಿಗೆ ಅಗತ್ಯ ಬೆಂಬಲವನ್ನು ನೀಡುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಮನವಿ ಮಾಡಿದರು.

**(ಕ್ರಮ: ಕೆವಿಐಸಿ, ಕೆವಿಐಬಿ ಮತ್ತು ಡಿಐಸಿ ಇಲಾಖೆಗಳು ಮತ್ತು ಸದಸ್ಯ ಬ್ಯಾಂಕುಗಳು)**

**ಕಾರ್ಯಸೂಚಿ ವಿಷಯ ಸಂಖ್ಯೆ - 36**

**ಡಿಸಿಸಿ/‘ಡಿಎಲ್‌ಆರ್‌ಸಿ’ ಸಭೆಯಲ್ಲಿ ಇತ್ಯರ್ಥವಾಗದ ಸಮಸ್ಯೆಗಳು:**

**ದೊಡ್ಡಾಲಹಳ್ಳಿ** ಮತ್ತು ಕೋಡಿಹಳ್ಳಿಯಲ್ಲಿ 'ಯುಕೋ ಬ್ಯಾಂಕ್' ಹೊಸ ಬಿ.ಸಿ.ಗಳನ್ನು ನೇಮಕ ಮಾಡದಿರುವುದನ್ನು 'ಎಲ್‌ಡಿಎಂ' ರಾಮನಗರ ಪ್ರಸ್ತಾಪಿಸಿದೆ ಎಂದು ಸಂಚಾಲಕರು ಮಾಹಿತಿ ನೀಡಿದರು. ಸದರಿ ಸ್ಥಳಗಳಲ್ಲಿ ತಕ್ಷಣವೇ 'ಬಿ.ಸಿ'ಗಳನ್ನು ನೇಮಿಸುವಂತೆ ಯುಕೋ ಬ್ಯಾಂಕ್‌ಗೆ 'ಎಸ್‌ಎಲ್‌ಬಿಸಿ' ವಿನಂತಿಸಿತು.

**(ಕ್ರಮ: ಯುಕೋ ಬ್ಯಾಂಕ್)**

**ಕಾರ್ಯಸೂಚಿ ವಿಷಯ ಸಂಖ್ಯೆ - 37**

**ಪರಿಶೀಲನಾ ಅವಧಿಯಲ್ಲಿ ನಡೆದ ಉಪಸಮಿತಿ ಸಭೆಗಳು:**

ದುರ್ಬಲ ವರ್ಗಗಳ ಉಪಸಮಿತಿಗಳು(ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ) ಸೆಪ್ಟೆಂಬರ್, ಡಿಸೆಂಬರ್ 2023 ಮತ್ತು ಮಾರ್ಚ್ 2024ರ ಸಭೆಗಳನ್ನು, 'ಭದ್ರತೆ' ಉಪಸಮಿತಿಗಳು ಡಿಸೆಂಬರ್ 2023 ಮತ್ತು ಮಾರ್ಚ್ 2024ರ (ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ) ಮತ್ತು 'ರೀಟೇಲ್' ಉಪಸಮಿತಿಗಳು(ಬ್ಯಾಂಕ್ ಆಫ್ ಬರೋಡಾ) ಡಿಸೆಂಬರ್ 2023 ಮತ್ತು ಮಾರ್ಚ್ 2024ರ ಸಭೆಗಳನ್ನು 'ಸಂಚಾಲಕ ಬ್ಯಾಂಕ್' ನಡೆಸಿಲ್ಲ ಎಂದು ಸಂಚಾಲಕರು ಸಭೆಗೆ ಮಾಹಿತಿ ನೀಡಿದರು.

ಮೇಲಿನ ಸಭೆಗಳನ್ನು ತಕ್ಷಣವೇ ನಡೆಸಿ ನಡಾವಳಿಗಳನ್ನು ಹಂಚಿಕೊಳ್ಳುವಂತೆ ಸದಸ್ಯ ಸಂಚಾಲಕ ಬ್ಯಾಂಕ್‌ಗೆ ಅಧ್ಯಕ್ಷರು ಮನವಿ ಮಾಡಿದರು.

**(ಕ್ರಮ: ಎಸ್‌ಬಿಐ, ಬಿಒಬಿ)**

**ಕಾರ್ಯಸೂಚಿ ವಿಷಯ ಸಂಖ್ಯೆ - 38**

**ಇತರ ಸಮಸ್ಯೆಗಳು:**

**38.1. ಬ್ಯಾಂಕುಗಳಿಂದ ಕನ್ನಡ ಭಾಷೆಯ ಅನುಷ್ಠಾನ.**

ಎಲ್ಲಾ ಸದಸ್ಯ ಬ್ಯಾಂಕುಗಳು ಮತ್ತು 'ಎಲ್‌ಡಿಎಂ'ಗಳು ಈ ಕೆಳಗಿನ ಅಂಶಗಳನ್ನು ಖಚಿತಪಡಿಸಿಕೊಳ್ಳಬೇಕೆಂದು ಸಂಚಾಲಕರು ವಿನಂತಿಸಿದರು:

1) ಖಾತೆ ತೆರೆಯುವ ನಮೂನೆಗಳು, ಸಾಲದ ಅರ್ಜಿಗಳು, ಚಲನ್‌ಗಳು ಇತ್ಯಾದಿಗಳ ಲಭ್ಯತೆಯು ಎಲ್ಲಾ ಶಾಖೆಗಳಲ್ಲಿ ಕನ್ನಡ ಭಾಷೆಯಲ್ಲಿರಬೇಕು.

2) ಬ್ಯಾಂಕ್ ಎಟಿಎಂಗಳು, ಬಿಎನ್‌ಎಗಳು, ಸೂಚನಾ ಫಲಕಗಳು, ಲೆಟರ್‌ಹೆಡ್‌ಗಳು, ಬ್ಯಾಂಕ್ / ಶಾಖೆಯ ಮೊಹರೆಗಳು ಮತ್ತು `ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಕೇಂದ್ರಗಳು'(RSETIs)/ 'ಗ್ರಾಮೀಣಾಭಿವೃದ್ಧಿ ಮತ್ತು ಸ್ವಯಂ ಉದ್ಯೋಗ ತರಬೇತಿ ಕೇಂದ್ರ'ಗಳಲ್ಲಿ(RUDSETIs)
ಹಾಗೂ 'ಹಣಕಾಸು ಶಿಕ್ಷಣ ಕೇಂದ್ರ'ಗಳಲ್ಲಿ (ಎಫ್‌ಎಲ್‌ಸಿ) ಕನ್ನಡ ಭಾಷೆಯ ಬಳಕೆ.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕುಗಳು ಮತ್ತು 'ಎಲ್‌ಡಿಎಂ'ಗಳು)**

**38.2 ಸಾರ್ವಜನಿಕರಿಗಾಗಿ 'ಶುಲ್ಕ ರಹಿತ' ಸಹಾಯವಾಣಿ ಮೂಲಕ ಆಡ್-ಆನ್ ಸೇವೆಗಳನ್ನು ಒದಗಿಸುವುದು**

ಏಪ್ರಿಲ್ 2024ರಿಂದ ಜೂನ್ 2024ರವರೆಗೆ ಸಹಾಯವಾಣಿಗೆ ಸ್ವೀಕರಿಸಿದ ಒಟ್ಟು ಕರೆಗಳ ಸಂಖ್ಯೆ 2920 ಎಂದು ಸಂಚಾಲಕರು ಮಾಹಿತಿ ನೀಡಿದರು.

ಎಲ್ಲಾ ಸದಸ್ಯ ಬ್ಯಾಂಕುಗಳು ತಮ್ಮ ಗ್ರಾಹಕರಲ್ಲಿ ಶುಲ್ಕ ರಹಿತ ಸಹಾಯವಾಣಿ ಸಂಖ್ಯೆ: 18004259777 ಅನ್ನು ಜನಪ್ರಿಯಗೊಳಿಸಬೇಕು ಎಂದು ವಿನಂತಿಸಿದರು.

ರಾಜ್ಯದ ಎಲ್ಲಾ ಬ್ಯಾಂಕ್ ಶಾಖೆಗಳಲ್ಲಿ ದ್ವಿಭಾಷಾ ರೂಪದಲ್ಲಿ ಶುಲ್ಕ ರಹಿತ ಸಹಾಯವಾಣಿ ಸಂಖ್ಯೆಯ ವ್ಯಾಪಕ ಪ್ರಚಾರ ನೀಡಲಾಗುವುದು ಎಂದು ಅಧ್ಯಕ್ಷರು

ಸದನಕ್ಕೆ ಮಾಹಿತಿ ನೀಡಿದರು. ಶುಲ್ಕ ರಹಿತ ಸಹಾಯವಾಣಿ ಸಂಖ್ಯೆಯ ದತ್ತಾಂಶ ವಿಶ್ಲೇಷಣೆಯನ್ನು ಒದಗಿಸುವಂತೆ ಅವರು 'ಎಸ್‌ಎಲ್ ಬಿಸಿ'ಯನ್ನು ವಿನಂತಿಸಿದರು.

ಕಡಿಮೆ ಅಂಕಿಗಳ ಶುಲ್ಕ ರಹಿತ ಸಹಾಯವಾಣಿ ಸಂಖ್ಯೆಯನ್ನು ಹೊಂದುವಂತೆ ಕೆನರಾ ಬ್ಯಾಂಕಿನ ಕಾರ್ಯನಿರ್ವಾಹಕ ನಿರ್ದೇಶಕರು 'ಎಸ್‌ಎಲ್‌ಬಿಸಿ'ಗೆ ಸೂಚಿಸಿದರು.

**(ಕ್ರಮ: ಎಲ್ಲಾ ಬ್ಯಾಂಕುಗಳು)**

**38.3: 30.06.2024ರಂದು ಇದ್ದಂತೆ, ಪ್ರಾಯೋಜಕ ಬ್ಯಾಂಕುಗಳು ವರದಿ ಮಾಡಿದ ಮತ್ತು'ಆರ್‌ಎಸ್‌ಇಟಿಐ'ಗಳು (RSETIs)/ 'ಆರ್‌ಯುಡಿಎಸ್‌ಐಟಿಐ'ಗಳ(RUDSETIs) ಸ್ಥಿತಿಗತಿ ಈ ಕೆಳಗಿನಂತಿದೆ:**

1027 ತರಬೇತಿ ಕಾರ್ಯಕ್ರಮಗಳನ್ನು ನಡೆಸುವ ಗುರಿಯ ಪೈಕಿ ಜೂನ್ 30, 2024ರವರೆಗೆ, ಒಟ್ಟು 305 ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು.

**38.4: ಕರ್ನಾಟಕ ರಾಜ್ಯದಲ್ಲಿ 7 'ರುಡ್ಸೆಟಿ'(RUDSETI) ಮತ್ತು26 'ರೆಸ್ಟಿ'ಗಳ(RSETIs) ಕಾರ್ಯನಿರ್ವಹಣೆ ಮತ್ತು ಕಾರ್ಯಕ್ಷಮತೆ:**

ತರಬೇತಿ ಪಡೆದ ವ್ಯಕ್ತಿಗಳ ಸಂಖ್ಯೆ 8,569 ಆಗಿದ್ದು, ಈ ಪೈಕಿ 156 ಮಂದಿಯನ್ನು 2024-25ರ ಆರ್ಥಿಕ ವರ್ಷದಲ್ಲಿ 'ಸಾಲ ಸಂಪರ್ಕ'ಕ್ಕೆ ಒಳಪಡಿಸಲಾಗಿದೆ ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು.

**(ಕ್ರಮ: 'ರುಡ್ಸೆಟಿ'(RUDSETI) /'ರೆಸ್ಟಿ'ಗಳ(RSETIs) ರಾಜ್ಯ ನಿರ್ದೇಶಕರು, 'ರೆಸ್ಟಿ'ಗಳ(RSETIs) ಕುರಿತಾದ 'ಎಸ್‌ಎಲ್‌ಬಿಸಿ' ಉಪಸಮಿತಿ ಹಾಗೂ ಕರ್ನಾಟ ಸರ್ಕಾರದ ಕೌಶಲ್ಯ ಅಭಿವೃದ್ಧಿ ಇಲಾಖೆ)**

**ಕಾರ್ಯಸೂಚಿ ವಿಷಯ ಸಂಖ್ಯೆ - 39**

**ಯಶೋಗಾಥೆಗಳು:**

ಶ್ರೀಮತಿ ಮಹಾದೇವಿ ಚೌಡಕಿ ಮತ್ತು ಶ್ರೀ ನವೀನ ಗೋಪಾಲಪ್ಪ ಹರಿಜನ ಅವರು ಕ್ರಮವಾಗಿ ಧಾರವಾಡದ 'ರುಡ್ಸೆಟಿ'(RUDSETI) ಮತ್ತು ಚಿತ್ರದುರ್ಗದ 'ರುಡ್ಸೆಟಿ'(RUDSETI) ಇಂದ ತರಬೇತಿ ಪಡೆದಿದ್ದಾರೆ ಮತ್ತು ಅವರು ಕಂಪ್ಯೂಟರ್ ತರಬೇತಿ ಕೇಂದ್ರ ಮತ್ತು ಫೋಟೋ ಸ್ಟುಡಿಯೋದಲ್ಲಿ ಉದ್ಯಮಶೀಲತೆಯನ್ನು ಯಶಸ್ವಿಯಾಗಿ ಪ್ರಾರಂಭಿಸಿದ್ದಾರೆ ಎಂದು ಉಪ ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು. ಇಬ್ಬರೂ ಕ್ರಮವಾಗಿ 'ಕೆನರಾ ಬ್ಯಾಂಕ್' ಮತ್ತು 'ಕರ್ನಾಟಕ ವಿಕಾಸ್ ಗ್ರಾಮೀಣ ಬ್ಯಾಂಕ್'ನಿಂದ ಆರ್ಥಿಕ ನೆರವು ಪಡೆದಿದ್ದಾರೆ ಎಂದು ಸಂಚಾಲಕರು ತಿಳಿಸಿದರು.

**ಟೇಬಲ್ ಕಾರ್ಯಸೂಚಿ**

ಇ-ಕೆವೈಸಿ ವೈಫಲ್ಯ, ಆಧಾರ್ ಲಿಂಕ್ ಮಾಡಿದ ನಿಷ್ಕ್ರಿಯ ಬ್ಯಾಂಕ್ ಖಾತೆಗಳು, 'ಎನ್‌ಪಿಸಿಐ' ಮ್ಯಾಪಿಂಗ್ ವೈಫಲ್ಯ ಇತ್ಯಾದಿಗಳಿಂದಾಗಿ ಸುಮಾರು 1.82 ಲಕ್ಷ ಫಲಾನುಭವಿಗಳು 'ಗೃಹಲಕ್ಷ್ಮಿ ಯೋಜನೆ'ಯ ಪ್ರಯೋಜನಗಳನ್ನು ಪಡೆಯುತ್ತಿಲ್ಲ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಜಂಟಿ ನಿರ್ದೇಶಕರು ಸದನಕ್ಕೆ ಮಾಹಿತಿ ನೀಡಿದರು.

ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಸದಸ್ಯ ಬ್ಯಾಂಕುಗಳಿಗೆ ಸಲ್ಲಿಸುವುದಕ್ಕಾಗಿ ವಿವರವಾದ ದತ್ತಾಂಶ ಒದಗಿಸುವಂತೆ ಇಲಾಖೆಗೆ 'ಎಸ್‌ಎಲ್‌ಬಿಸಿ' ಮನವಿ ಮಾಡಿತು.

ಅಭಿಯಾನ ಅಥವಾ ಆಂದೋಲನದ ಮಾದರಿಯಲ್ಲಿ ಫಲಾನುಭವಿಗಳ ಖಾತೆಗಳನ್ನು ಸಕ್ರಿಯಗೊಳಿಸುವಂತೆ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಎಲ್ಲಾ ಬ್ಯಾಂಕುಗಳಿಗೆ ಸೂಚನೆ ನೀಡಿದರು.

**ಎಸ್ಎಲ್‌ಬಿಸಿ - ಕರ್ನಾಟಕ**

**ಭಾಗವಹಿಸಿದವರ ಪಟ್ಟಿ**

**14.08.2024 ರಂದು ನಡೆದ 166ನೇ 'ಎಸ್ಎಲ್‌ಬಿಸಿ' ಸಭೆ**

| ಕ್ರ. ಸಂ. | ಹೆಸರು / ಶ್ರೀಯುತರು | ಹುದ್ದೆ | ಸಂಸ್ಥೆ |
|---|---|---|---|
| 1 | ಡಾ. ಶಾಲಿನಿ ರಜನೀಶ್ | ಮುಖ್ಯ ಕಾರ್ಯದರ್ಶಿಗಳು | ಕರ್ನಾಟಕ ಸರ್ಕಾರ |
| 2 | ಶ್ರೀಮತಿ ಸೋನಾಲಿ ಸೇನ್ ಗುಪ್ತಾ | ಪ್ರಾದೇಶಿಕ ನಿರ್ದೇಶಕರು | ಆರ್‌ಬಿಐ |
| 3 | ಶ್ರೀ ಭವೇಂದ್ರ ಕುಮಾರ್ | ಕಾರ್ಯನಿರ್ವಾಹಕ ನಿರ್ದೇಶಕರು | ಕೆನರಾ ಬ್ಯಾಂಕ್ |
| 4 | ಡಾ. ವಿಶಾಲ್ ಆರ್. | ಸರ್ಕಾರದ 'ಎಫ್‌ಡಿ' (ಹಣಕಾಸಿನ ಸುಧಾರಣೆಗಳು) ಕಾರ್ಯದರ್ಶಿಗಳು | ಕರ್ನಾಟಕ ಸರ್ಕಾರ |
| 5 | ಶ್ರೀ. ಪಿ ಸಿ ದಾಶ್ | ಪ್ರಧಾನ ವ್ಯವಸ್ಥಾಪಕರು | ನಬಾರ್ಡ್ |
| 6 | ಶ್ರೀ ಕೆ ಜೆ ಶ್ರೀಕಾಂತ್ | ಸಂಚಾಲಕರು | 'ಎಸ್ಎಲ್‌ಬಿಸಿ'-ಕರ್ನಾಟಕ |
| 7 | ಶ್ರೀ ಭಾಸ್ಕರ ಚಕ್ರವರ್ತಿ ಎಂ. | ಉಪ ಸಂಚಾಲಕರು | 'ಎಸ್ಎಲ್‌ಬಿಸಿ'-ಕರ್ನಾಟಕ |

| | | | |
|---|---|---|---|
| 8 | ಶ್ರೀ ವಿ. ಹರಿ ಪ್ರಸಾದ್ | ಉಪ ಪ್ರಧಾನ ವ್ಯವಸ್ಥಾಪಕರು | ಆರ್‌ಬಿಐ |
| 9 | ಶ್ರೀ. ಸಂಜಯ್ ಕುಮಾರ್ | ಉಪ ಪ್ರಧಾನ ವ್ಯವಸ್ಥಾಪಕರು | ನಬಾರ್ಡ್ |
| 10 | ಶ್ರೀ ಬಿ.ಪಾರ್ಶ್ವನಾಥ್ | ಉಪ ಪ್ರಧಾನ ವ್ಯವಸ್ಥಾಪಕರು, 'ಎಸ್‌ಎಲ್‌ಬಿಸಿ' | ಕೆನರಾ ಬ್ಯಾಂಕ್ |
| 11 | ಶ್ರೀಮತಿ ಪಿ.ಐ.ಶ್ರೀವಿದ್ಯಾ | ಯೋಜನಾ ನಿರ್ದೇಶಕರು | ಎನ್‌ಎಲ್‌ಎಂ, ಕರ್ನಾಟಕ ಸರ್ಕಾರ |
| 12 | ಶ್ರೀಮತಿ ಎಂ ಜಿ ಪಾಲಿ | ಯೋಜನಾ ನಿರ್ದೇಶಕರು, 'ಸ್ತ್ರೀ ಶಕ್ತಿ' | ನಿರ್ದೇಶಕರು, ಮಕ್ಕಳು ಮತ್ತು ಮಹಿಳಾ ಕಲ್ಯಾಣ ಇಲಾಖೆ, ಕರ್ನಾಟಕದ ಸರ್ಕಾರ |
| **ಸಂಚಾಲಕ - ಕೆನರಾ ಬ್ಯಾಂಕ್** | | | |
| 13 | ಪ್ರದೀಪ್ ಕುಮಾರ್ ಎಚ್. | ವಿಭಾಗೀಯ ವ್ಯವಸ್ಥಾಪಕರು | ಕೆನರಾ ಬ್ಯಾಂಕ್ |
| 14 | ಅಮೋಲ್ ಆರ್ ಅಕೋಲ್ಕರ್ | ವ್ಯವಸ್ಥಾಪಕರು- 'ಎಸ್ ಎಲ್‌ಬಿಸಿ' | ಕೆನರಾ ಬ್ಯಾಂಕ್ |
| 15 | ವಿದ್ಯಾ | ವ್ಯವಸ್ಥಾಪಕರು- 'ಎಸ್ ಎಲ್‌ಬಿಸಿ' | ಕೆನರಾ ಬ್ಯಾಂಕ್ |

| | | | |
|---|---|---|---|
| 16 | ಚೇತನ್ ಕೆ.ಎಸ್. | ವ್ಯವಸ್ಥಾಪಕರು | ಕೆನರಾ ಬ್ಯಾಂಕ್ |
| 17 | ವಿಕಾಸ್ ಠಾಕೂರ್ | ವ್ಯವಸ್ಥಾಪಕರು | ಕೆನರಾ ಬ್ಯಾಂಕ್ |
| 18 | ಹರ್ಷ | ವ್ಯವಸ್ಥಾಪಕರು | ಕೆನರಾ ಬ್ಯಾಂಕ್ |
| 19 | ಅಖಿಲ್ ಆರ್ | ವ್ಯವಸ್ಥಾಪಕರು | ಕೆನರಾ ಬ್ಯಾಂಕ್ |
| **ಸದಸ್ಯ ಬ್ಯಾಂಕುಗಳು ಮತ್ತು ರಾಜ್ಯ ಸರ್ಕಾರಿ ಇಲಾಖೆಗಳು** | | | |
| 20 | ವಿ ಎನ್ ಶರ್ಮಾ | ಪ್ರಧಾನ ವ್ಯವಸ್ಥಾಪಕರು | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ |
| 21 | ಪ್ರಮೋದ್ ಸರಾಫ್ | ಉಪ ಪ್ರಧಾನ ವ್ಯವಸ್ಥಾಪಕರು | ಕೆನರಾ ಬ್ಯಾಂಕ್ |
| 22 | ಸುಮನಾ ದಾಸ್ ಗುಪ್ತಾ | ಉಪ ಪ್ರಧಾನ ವ್ಯವಸ್ಥಾಪಕರು | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ |
| 23 | ಬುಬುಲ್ ಬರ್ದೋಲಾಯ್ | ಸಹಾಯಕ ಪ್ರಧಾನ ವ್ಯವಸ್ಥಾಪಕರು | ಆರ್‌ಬಿಐ |
| 24 | ಸಿ.ವಿ.ಸುಧೀರ್ | ಸಹಾಯಕ ಪ್ರಧಾನ ವ್ಯವಸ್ಥಾಪಕರು | ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ |

| | | | |
|---|---|---|---|
| 25 | ಮನೋಜ್ ಕೆ ಸಿನ್ಹಾ | ಸಹಾಯಕ ಪ್ರಧಾನ ವ್ಯವಸ್ಥಾಪಕರು | ಬ್ಯಾಂಕ್ ಆಫ್ ಬರೋಡಾ |
| 26 | ಎಂ.ಎಸ್.ಭಟ್ | ಸಹಾಯಕ ಪ್ರಧಾನ ವ್ಯವಸ್ಥಾಪಕರು | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ |
| 27 | ಸವಿತಾ ಆರ್ | ವಿಭಾಗೀಯ ವ್ಯವಸ್ಥಾಪಕರು | ಕೆನರಾ ಬ್ಯಾಂಕ್ |
| 28 | ವೆಂಕಟ ಅನಿಲ್ | ರಾಜ್ಯ ನಿಯಂತ್ರಕರು | ಎಚ್‌ಡಿಎಫ್‌ಸಿ ಬ್ಯಾಂಕ್ |
| 29 | ನಾಗರಾಜ್ ಎಸ್ | ಉಪ ಪ್ರಧಾನ ವ್ಯವಸ್ಥಾಪಕರು | ಐಸಿಐಸಿಐ ಬ್ಯಾಂಕ್ |
| 30 | ವಸಂತ್ ಕುಮಾರ್ | ಉಪ ಪ್ರಧಾನ ವ್ಯವಸ್ಥಾಪಕರು | ಕರ್ಣಾಟಕ ಬ್ಯಾಂಕ್ |
| 31 | ಸುನಿಲ್ ಕುರ್ತ್‌ಕೋಟಿ | ಹಣಕಾಸು ಸಲಹೆಗಾರರು | ಕರ್ನಾಟಕದ ಸರ್ಕಾರ |
| 32 | ಎಲ್ಲಾ ಸದಸ್ಯ ಬ್ಯಾಂಕುಗಳು, ಎಲ್ಲಾ ರಾಜ್ಯ ಸರ್ಕಾರಿ ಇಲಾಖೆಗಳು ಮತ್ತು ‘ಎಲ್‌ಡಿಎಂ’ಗಳು | ವಿಡಿಯೊ ಕಾನ್ಫರೆನ್ಸ್ ಮೂಲಕ | |

# 166ನೇ ‘ಎಸ್‌ಎಲ್‌ಬಿಸಿ’ ಸಭೆಯ ಸ್ಥೂಲ ನೋಟ







(ಜೂನ್, ೨೦೨೪ ತ್ರೈಮಾಸಿಕ ವಿಮರ್ಶೆ)
ಕರ್ನಾಟಕ
Dr. SHALINI RAJNEESH



*****